21 July 2026 Tuesday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ
info.varthaman@gmail.com
9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 231 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

**ಭಾವನಾಂತರಂಗ**

ಆಡುವ ಮಾತಿನಲ್ಲಿ ಹಿಡಿತವಿರಬೇಕು, ಕೇಳಿದವರು ಕ್ಷಮಿಸಬಹುದೇನೋ ಆದರೆ ಮರೆಯಲಾರರು!

-ಸ್ನೇಹಾ ಆನಂದ್


ಸಮಾಜದ ಸ್ವಾಸ್ಥ್ಯ ಕಾಪಾಡುವ ಪತ್ರಕರ್ತರು: ಶಾಸಕ ಸಿ.ಪುಟ್ಟರಂಗಶೆಟ್ಟಿ ಪುಟ ಸಂ. 2


ಬೈರಮಂಗಲದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲು ಆಗ್ರಹ ಪುಟ ಸಂ. 3


ಮೈಸೂರು ವಾರಿಯರ್ಸ್: ಮಹಿಳಾ ತಂಡ ಪ್ರಕಟ ಪುಟ ಸಂ. 4

# ಮನೆ ಬಾಗಿಲಿಗೆ ಪಿಆರ್‌ಸಿ

## ಉಪ ತಹಶೀಲ್ದಾರ್‌ಗಳಿಗೆ ಅಧಿಕಾರ: ಸಿಎಂ ಡಿ.ಕೆ.ಶಿವಕುಮಾರ್



**ಬೆಂಗಳೂರು:** ರಾಜ್ಯದಲ್ಲಿ ಮನೆ ಮನೆಗೆ ತೆರಳಿ ಶಾಶ್ವತ ನಿವಾಸ ಪ್ರಮಾಣಪತ್ರ (ಪಿಆರ್‌ಸಿ) ವಿತರಿಸುವ ಯೋಜನೆಗೆ ವಿಧಾನಸೌಧದಲ್ಲಿ ಸೋಮವಾರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಲನೆ ನೀಡಿದರು.

ರಾಜ್ಯದ ಅರ್ಹ ವ್ಯಕ್ತಿಗಳು ಜಾತಿ ಪ್ರಮಾಣಪತ್ರ ಮತ್ತು ಶಾಶ್ವತ ನಿವಾಸ ಪ್ರಮಾಣಪತ್ರಗಳನ್ನು ಯಾವುದೇ ಶುಲ್ಕವಿಲ್ಲದೆ ತಮ್ಮ ಮನೆ ಬಾಗಿಲಲ್ಲೇ ಪಡೆಯಬಹುದು. ಪ್ರಮಾಣ ಪತ್ರ ನೀಡುವ ಅಧಿಕಾರವನ್ನು ಉಪ ತಹಸೀಲ್ದಾರ್‌ಗಳಿಗೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ತಂತ್ರಜ್ಞಾನ ಮತ್ತು ಸರಳೀಕೃತ ಕಾರ್ಯವಿಧಾನಗಳ ಮೂಲಕ ಆಡಳಿತವನ್ನು ಜನರಿಗೆ ಹತ್ತಿರವಾಗಿಸುವುದರೊಂದಿಗೆ ಇವು ರಾಜ್ಯದ ಆಡಳಿತಾತ್ಮಕ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದನ್ನು ಸೃಷ್ಟಿಸುತ್ತವೆ ಎಂದು ಅವರು ಹೇಳಿದರು.

ಕಾಯಂ ವಾಸಸ್ಥಳ ಪ್ರಮಾಣಪತ್ರಗಳನ್ನು ನೀಡುವ ಹೆಚ್ಚುವರಿ ಅಧಿಕಾರವನ್ನು ಕಂದಾಯ ಇಲಾಖೆಯು ಉಪ ತಹಶೀಲ್ದಾರರಿಗೆ ವಹಿಸಿದೆ. ಈ ಕ್ರಮದಿಂದ ಪ್ರಕ್ರಿಯೆಯ ಸಮಯ ಕಡಿಮೆಯಾಗಲಿದೆ. ಸೇವೆಯು ಜನರಿಗೆ ಇನ್ನಷ್ಟು ಸುಲಭವಾಗಿ ಲಭ್ಯವಾಗುವ ನಿರೀಕ್ಷೆಯಿದೆ. ಸರ್ಕಾರವೇ ನಿಮ್ಮ ಬಾಗಿಲಿಗೆ ಬರುತ್ತದೆ. ಇದು ನಮ್ಮ ಭರವಸೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಇದು ಕೇವಲ ಪ್ರಮಾಣಪತ್ರಗಳನ್ನು ವಿತರಿಸುವ ವಿಷಯವಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ನಾಗರಿಕನ ಗುರುತು ಮತ್ತು ಧ್ವನಿಯನ್ನು ರಕ್ಷಿಸುವ ವಿಷಯವಾಗಿದೆ. ಜನರು ಸರ್ಕಾರಿ ಕಚೇರಿಯಿಂದ ಕಚೇರಿಗೆ ಅಲೆದಾಡುವ ಬದಲು, ಸರ್ಕಾರಿ ಸೇವೆಗಳು ನೇರವಾಗಿ ಜನರನ್ನು ತಲುಪುವಂತೆ ಮಾಡುವುದೇ ನಮ್ಮ ಉದ್ದೇಶ ಎಂದರು.

ಸರ್ಕಾರ ಈಗಾಗಲೇ 4.85 ಕೋಟಿ ಡಿಜಿಟಲ್ ಜಾತಿ ಪ್ರಮಾಣಪತ್ರಗಳನ್ನು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮವಾರು ವರ್ಗೀಕರಿಸಿ ಪಿಡಿಎಫ್ ಸ್ವರೂಪದಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ಹಂಚಿಕೊಂಡಿದೆ. ಜಿಲ್ಲಾಡಳಿತಗಳು ಈ ಪ್ರಮಾಣಪತ್ರಗಳನ್ನು ಮುದ್ರಿಸಿ

ಪುಟ 2ಕ್ಕೆ

### ಜಾತಿ ಪತ್ರಕ್ಕೆ ಆಧಾರ್, ಮೊಬೈಲ್ ಜೋಡಣೆ

ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು, ಫಲಾನುಭವಿಗಳ ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ ಮತ್ತು ಸ್ವೀಕೃತಿ ವಿವರಗಳನ್ನು ದಾಖಲಿಸಲು ಪ್ರತ್ಯೇಕ ಮೊಬೈಲ್ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸಲಾಗಿದೆ.

ನಾಗರಿಕರು ನಿಗದಿತ ಸರ್ಕಾರಿ ವೆಬ್‌ಸೈಟ್‌ನಿಂದ ತಮ್ಮ ಜಾತಿ ಪ್ರಮಾಣಪತ್ರದ ಆರ್‌ಡಿ ಸಂಖ್ಯೆ, ಪಡಿತರ ಚೀಟಿ ಸಂಖ್ಯೆ ಅಥವಾ ಆಧಾರ್ ಸಂಖ್ಯೆಯನ್ನು ಬಳಸಿಕೊಂಡು ಪ್ರಮಾಣಪತ್ರಗಳನ್ನು ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಈ ಸೇವೆ ಸರ್ಕಾರಿ ಸಹಾಯ ಕೇಂದ್ರಗಳಲ್ಲೂ ಲಭ್ಯವಿರುತ್ತದೆ.

ಸರ್ಕಾರ ಹೋಬಳಿ ಮಟ್ಟದಲ್ಲಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಿದೆ. ಇಲ್ಲಿ ನಾಗರಿಕರು ಜಾತಿ ಪ್ರಮಾಣಪತ್ರಗಳು ಮತ್ತು ಇತರ ಅಗತ್ಯ ದಾಖಲೆಗಳ ಮುದ್ರಿತ ಪ್ರತಿಗಳನ್ನು ಉಚಿತವಾಗಿ ಪಡೆಯಬಹುದು. ಸುಮಾರು 57 ಲಕ್ಷ ಜಾತಿ ಪ್ರಮಾಣಪತ್ರಗಳನ್ನು ಈಗಾಗಲೇ ಫಲಾನುಭವಿಗಳ ಮೊಬೈಲ್ ಸಂಖ್ಯೆಗಳೊಂದಿಗೆ ಜೋಡಿಸಲಾಗಿದೆ.

ಪುಟ 2ಕ್ಕೆ

## ಗಣಿ ಇಲಾಖೆಗೆ 'ಮೇಜರ್ ಸರ್ಜರಿ'

### ಒಂದೇ ಕಡೆ ಬೇರುಬಿಟ್ಟಿದ್ದ 160 ಅಧಿಕಾರಿಗಳ ಎತ್ತಂಗಡಿ



**ಬೆಂಗಳೂರು:** ಗಣಿ ಇಲಾಖೆಗೆ ಮೇಜರ್ ಸರ್ಜರಿ ಮಾಡಲಾಗಿದೆ. ಹಲವು ವರ್ಷಗಳಿಂದ ಒಂದೇ ಸ್ಥಳದಲ್ಲಿ ಠಿಕಾಣಿ ಹೂಡಿದ್ದ ಇಲಾಖೆಯ ಶೇ.80ರಷ್ಟು ಸಿಬ್ಬಂದಿಯನ್ನು ವರ್ಗಾವಣೆ ಮಾಡುವ ಮೂಲಕ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಬಿಗ್ ಶಾಕ್ ನೀಡಿದ್ದಾರೆ.

ಗಣಿ ಇಲಾಖೆಯ 160 ಅಧಿಕಾರಿಗಳನ್ನು ಒಮ್ಮೆಗೆ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. 131 ಭೂವಿಜ್ಞಾನಿಗಳು, 23 ಹಿರಿಯ ಭೂವಿಜ್ಞಾನಿಗಳು, 6 ಉಪನಿರ್ದೇಶಕರನ್ನು ವರ್ಗಾವಣೆ ಮಾಡಲಾಗಿದೆ.

ದಶಕಗಳ ಕಾಲ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮತ್ತು ಸ್ವಂತ ಹಾಗೂ ನೆರೆಯ ಜಿಲ್ಲೆಗಳಲ್ಲಿ ಬೀಡುಬಿಟ್ಟಿದ್ದ ಅಧಿಕಾರಿಗಳನ್ನು ರಾಜ್ಯ ಸರ್ಕಾರ ಎತ್ತಂಗಡಿ ಮಾಡಿದೆ.

ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಲವು ಉಪ ನಿರ್ದೇಶಕರು ಸ್ವಂತ ಜಿಲ್ಲೆಯಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಂಥವರ ವಿರುದ್ಧ ಹಲವು ದೂರು ಬಂದಿವೆ. ಏಕಸ್ವಾಮ್ಯವನ್ನು ಮುರಿಯಲು 160 ಅಧಿಕಾರಿಗಳನ್ನು ವರ್ಗಾವಣೆ ಮಾಡಿರುವುದಾಗಿ ಆದೇಶದಲ್ಲಿ ತಿಳಿಸಲಾಗಿದೆ. ಹುದ್ದೆಗೆ ತಕ್ಷಣ ಕರ್ತವ್ಯಕ್ಕೆ ವರದಿ ಮಾಡಿಕೊಂಡು ಕೇಂದ್ರ ಕಚೇರಿಗೆ ಮಾಹಿತಿಯನ್ನು ನೀಡುವಂತೆಯೂ ಆದೇಶದಲ್ಲಿ ಸೂಚಿಸಲಾಗಿದೆ.

## ಮುಲಾಜಿಲ್ಲದೇ ಅಕ್ರಮ ನಿವಾಸಿಗಳು 'ಕಿಕ್‌ಔಟ್'

### ಪಿಆರ್‌ಸಿಗೆ ಎಸ್‌ಐಆರ್ ಮಾನದಂಡ: ಡಿಸಿಎಂ ಜಿ.ಪರಮೇಶ್ವರ್



**ಬೆಂಗಳೂರು:** ಮಾನದಂಡಗಳ ಪ್ರಕಾರವೇ ಶಾಶ್ವತ ನಿವಾಸಿ ಪ್ರಮಾಣಪತ್ರ (ಪಿಆರ್‌ಸಿ) ನೀಡಲು ತೀರ್ಮಾನಿಸಲಾಗಿದೆ. ಅಕ್ರಮ ನಿವಾಸಿಗಳನ್ನು ಮುಲಾಜಿಲ್ಲದೇ ಹೊರ ಹಾಕಲಾಗುತ್ತದೆ ಎಂದು ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ತಿಳಿಸಿದರು.

ವಿಧಾನಸೌಧದಲ್ಲಿ ಸೋಮವಾರ ರಾಜ್ಯದಲ್ಲಿ ಮನೆ ಮನೆಗೆ ತೆರಳಿ ಶಾಶ್ವತ ನಿವಾಸ ಪ್ರಮಾಣಪತ್ರ ವಿತರಿಸುವ ಸೇವೆಗೆ ಚಾಲನೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಕೇಂದ್ರ ಸರ್ಕಾರ ಎಸ್‌ಐಆರ್ ಮಾಡಲು ಪ್ರಾರಂಭಿಸಿರುವ 11 ಮಾನದಂಡಗಳ

ಪುಟ 2ಕ್ಕೆ

## ವಿದ್ಯಾರ್ಥಿನಿಯಿಂದ ಲಂಚ: ಪ್ರಿನ್ಸಿಪಾಲ್ 'ಲೋಕಾ' ಬಲೆಗೆ

**ಶಿವಮೊಗ್ಗ:** ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ವಸತಿ ಶಾಲೆಗೆ ದಾಖಲಿಸಲು ವಿದ್ಯಾರ್ಥಿನಿಯ ಪೋಷಕರ ಬಳಿ ಲಂಚಕ್ಕೆ ಕೈಯೊಡ್ಡಿದ ಪ್ರಿನ್ಸಿಪಾಲ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಹುಣಸೆಕಟ್ಟೆ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಿನ್ಸಿಪಾಲ್ ನಾಮದೇವ ಅವರು ವಿದ್ಯಾರ್ಥಿನಿಯನ್ನು 7ನೇ ತರಗತಿಗೆ ದಾಖಲಿಸಿಕೊಳ್ಳಲು 20 ಸಾವಿರ ರೂ. ಲಂಚ ಕೇಳಿದ್ದರು ಎಂದು ಪೋಷಕರು ದೂರು

ಪುಟ 2ಕ್ಕೆ

# ಚೆನ್ನಮ್ಮಗೆ ಕಣ್ಣೀರ ವಿದಾಯ

## ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ



**ಹಾಸನ:** ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಪತ್ನಿ ಚೆನ್ನಮ್ಮ ಅವರಿಗೆ ಸೋಮವಾರ ಅಭಿಮಾನಿಗಳು ಮತ್ತು ಸಂಬಂಧಿಕರಿಂದ ಕಣ್ಣೀರ ಬೀಳ್ಕೊಡುಗೆ ನೀಡಲಾಯಿತು. ದೇವೇಗೌಡರ ಹುಟ್ಟೂರು ಹರದನಹಳ್ಳಿ ಮಾವಿನಕೆರೆ ರಂಗನಾಥಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಸೋಮವಾರ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿತು.

ಗಣ್ಯರು ಅಂತಿಮ ಪುಷ್ಪನಮನ ಸಲ್ಲಿಸಿದ ಬಳಿಕ 3 ಸುತ್ತು ಕುಶಾಲತೋಪು ಸಿಡಿಸಿ, ರಾಷ್ಟ್ರಗೀತೆ ನಮನದೊಂದಿಗೆ ಸರ್ಕಾರಿ ಗೌರವ ವಂದನೆ ಸಲ್ಲಿಸಲಾಯಿತು. 2 ನಿಮಿಷ ಮೌನಾಚರಣೆ ಸಲ್ಲಿಸಿದ ಬಳಿಕ ಮುಖ್ಯಮಂತ್ರಿ ಶಿವಕುಮಾರ್ ಅವರು ದೇವೇಗೌಡರ ಕುಟುಂಬಕ್ಕೆ ರಾಷ್ಟ್ರಧ್ವಜ ಹಸ್ತಾಂತರಿಸಿದರು. ಈ ವೇಳೆ ಡಿಕೆ ಶಿವಕುಮಾರ್ ಅವರು ದೇವೇಗೌಡರ ಕಾಲಿಗೆ ನಮಸ್ಕರಿಸಿದರು.

ಬಳಿಕ ದೇಹ ಶುದ್ಧಿ ಕಾರ್ಯ ನಡೆಯಿತು. ದೇವೇಗೌಡರು ಮತ್ತು ಕುಟುಂಬಸ್ಥರಿಂದ ಪಾರ್ಥಿವ ಶರೀರಕ್ಕೆ ಅಂತಿಮ ಪೂಜಾ ವಿಧಿವಿಧಾನ ನೇರವೇರಿಸಲಾಯಿತು. ಇದೇ ವೇಳೆ ಅರ್ಚಕರ ತಂಡದಿಂದ ಸ್ತೋತ್ರ ಪಠಣ ಕಾರ್ಯ ನಡೆಯಿತು. ನಂತರ ಮೂರು ಸುತ್ತು ಪಲ್ಲಕ್ಕಿ ಮೆರವಣಿಗೆ ನಡೆಸಿ ಒಕ್ಕಲಿಗ ಸಂಪ್ರದಾಯದಂತೆ ಅಂತಿಮ ಸಂಸ್ಕಾರ ನೆರವೇರಿಸಲಾಯಿತು.

ಹಿರಿಯ ಪುತ್ರ ಎಚ್.ಡಿ ರಮೇಶ್ ಅವರಿಂದ ಅಂತ್ಯಕ್ರಿಯೆ ಕಾರ್ಯವಿಧಾನ ನೆರವೇರಿತು. ಗುಂಡಿಯಲ್ಲಿ ಗಂಗಾಜಲ ಸಿಂಪಡಿಸಿ ಶುದ್ಧೀಕರಣ ನೆರವೇರಿಸಿದ ಬಳಿಕ ಪಲ್ಲಕ್ಕಿಯಲ್ಲಿ ಹೊತ್ತುತಂದ ಪಾರ್ಥಿವ ಶರೀರವನ್ನ ಇಳಿಸಿ ಅಂತ್ಯಕ್ರಿಯೆ ಮಾಡಲಾಯಿತು.

ಕೇಂದ್ರ ಸಚಿವರಾದ ಶಿವರಾಜ್‌ಸಿಂಗ್ ಚೌಹಾಣ್, ಮನೋಹರಲಾಲ್ ಖಟ್ಟರ್, ಪ್ರಲ್ಹಾದ ಜೋಶಿ, ವಿ.ಸೋಮಣ್ಣ, ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಕೆ.ಜೆ ಜಾರ್ಜ್, ಕೆ.ಹೆಚ್ ಮುನಿಯಪ್ಪ, ಶಾಸಕ ಬಿ.ವೈ ವಿಜಯೇಂದ್ರ, ಸಂಸದ ಬಿ.ವೈ ರಾಘವೇಂದ್ರ, ಡಾ. ನಿರ್ಮಲಾನಂದ ಸ್ವಾಮೀಜಿ, ನಂಜಾವಧೂತ ಶ್ರೀ, ರಂಭಾಪುರಿ ಶ್ರೀಗಳು ಸೇರಿದಂತೆ ಹಲವು ಸಚಿವರು, ನಾಯಕರು, ಗಣ್ಯರು ಅಂತಿಮ ಪುಷ್ಪನಮನ ಸಲ್ಲಿಸಿದರು.



### ಅಂತಿಮ ದರ್ಶನಕ್ಕೆ ಜನಸಾಗರ

**ಹಾಸನ:** ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಪತ್ನಿ ಚನ್ನಮ್ಮ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆಯಲು ಜನಸಾಗರವೇ ಹರಿದು ಬಂದಿತ್ತು. ಹೊಳೆನರಸೀಪುರದ ಎಚ್.ಡಿ. ರೇವಣ್ಣ ನಿವಾಸದ ಎದುರು ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಜನರು ಸರದಿಯಲ್ಲಿ ನಿಂತು ದರ್ಶನ ಪಡೆದರು.

ಹಾಸನದ ಮೂಲಕ ಹೊಳೆನರಸೀಪುರಕ್ಕೆ ಪಾರ್ಥಿವ ಶರೀರವನ್ನು ತರಲಾಯಿತು. ಭಾನುವಾರ ರಾತ್ರಿ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಸೋಮವಾರ ಬೆಳಿಗ್ಗೆ ಪೂಜೆ

ಪುಟ 2ಕ್ಕೆ

# ಸಂಸತ್ ಚಲೋ ಮೆರವಣಿಗೆ: 'ಕಾಕ್ರೋಚ್'ಗಳಿಗೆ ಲಾಠಿ ಏಟು



**ನವದೆಹಲಿ:** ಸಂಸತ್ ಭವನಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಕಾಕ್ರೋಚ್ ಜನತಾ ಪಾರ್ಟಿ ಸದಸ್ಯರ ಮೇಲೆ ಪೊಲೀಸರು ಲಾಠಿಚಾರ್ಜ್ ಮಾಡಿದ್ದಾರೆ. ಲಾಠಿಚಾರ್ಜ್ ಬೆನ್ನಲ್ಲೇ ದೆಹಲಿಯ ಕೆಲವು ಭಾಗಗಳಲ್ಲಿ ಮೊಬೈಲ್ ಇಂಟರ್ನೆಟ್ ಸ್ಥಗಿತಗೊಳಿಸಲಾಗಿದೆ.

ಸಂಸತ್ತಿನ ಮುಂಗಾರು ಅಧಿವೇಶನ ಆರಂಭದ ಮೊದಲ ದಿನವಾದ ಸೋಮವಾರ ನವದೆಹಲಿಯ ಜಂತರ್ ಮಂತರ್‌ನಿಂದ ಸಂಸತ್ ಭವನದತ್ತ ಚಲೋ ಸಂಸತ್ ಮೆರವಣಿಗೆಗೆ ಸಿಜೆಪಿ ಕರೆ ನೀಡಿತ್ತು.

ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಸೇರಿದ್ದ ಸಿಜೆಪಿ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು ಜಂತರ್ ಮಂತರ್‌ನಲ್ಲಿ ಜಮಾಯಿಸಿ ಸಂಸತ್ತಿನತ್ತ ತೆರಳಲು ಮುಂದಾದರು. ಈ ವೇಳೆ ಪೊಲೀಸರು ಪ್ರತಿಭಟನಕಾರರನ್ನು ತಡೆದರು. ಬ್ಯಾರಿಕೇಡ್‌ಗಳನ್ನು ದಾಟಿ ಮುನ್ನಗ್ಗುತ್ತಿದ್ದಂತೆ ಕಾರ್ಯಕರ್ತರ ಮೇಲೆ ಪೊಲೀಸರು ಲಾಠಿ ಪ್ರಯೋಗ ಮಾಡಿದ್ದಾರೆ.

ಮುಂಜಾಗ್ರತಾ ಕ್ರಮವಾಗಿ ದೆಹಲಿ ಪೊಲೀಸರು ಹಾಗೂ ರ್‍ಯಾಪಿಡ್ ಆಕ್ಷನ್ ಫೋರ್ಸ್ ಸಿಬ್ಬಂದಿ ಜಂತರ್ ಮಂತರ್ ರಸ್ತೆಯ ಸುತ್ತಲೂ ಬಿಗಿ ಭದ್ರತೆ ಒದಗಿಸಿದ್ದರು. ಪ್ರತಿಭಟನಾಕಾರರು ಪೊಲೀಸ್ ಕಾವಲನ್ನು ಮೀರಿ ಮುನ್ನುಗ್ಗಿದಾಗ ಪೊಲೀಸರು ಲಾಠಿಚಾರ್ಜ್ ನಡೆಸಿ ಹಲವು ಕಾರ್ಯಕರ್ತರನ್ನು ವಶಕ್ಕೆ ಪಡೆದರು. ಸಂಸತ್ತಿನ ಅಧಿವೇಶನ ಆರಂಭ ಆಗಿರುವುದರಿಂದ ದೆಹಲಿಯಲ್ಲಿ ನಾಗರಿಕ ಸುರಕ್ಷಾ ಸಂಹಿತೆಯ ಸೆಕ್ಷನ್ 163ರ ಅಡಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು.

## ವಿಡಿಯೋ ಕಾನ್ಫರೆನ್ಸ್: ಅಂತ್ಯ ಸಂಸ್ಕಾರ ವೀಕ್ಷಿಸಿದ ಪ್ರಜ್ವಲ್

**ಬೆಂಗಳೂರು:** ಅಜ್ಜಿ ಚೆನ್ನಮ್ಮ ಅವರ ಅಂತಿಮ ದರ್ಶನಕ್ಕಾಗಿ ಜೈಲಿನಲ್ಲಿರುವ ಮೊಮ್ಮಗ ಪ್ರಜ್ವಲ್ ರೇವಣ್ಣ ಪೆರೋಲ್‌ಗೆ ಅರ್ಜಿ ಸಲ್ಲಿಕೆ ಮಾಡಿಲ್ಲ. ಆದರೆ ಅಂತ್ಯಕ್ರಿಯೆಯಲ್ಲಿ




ವಿಡಿಯೋ ಕಾನ್ಫರೆನ್ಸ್ ಮೂಲಕ ಭಾಗಿಯಾಗಲು ಜೈಲು ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ಹಾಸನ ಜಿಲೆಯ ಹೊಳೆನರಸಿಪುರದ ಮಾವಿನಕೆರೆ ರಂಗನಾಥ ಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಚೆನ್ನಮ್ಮ ಅವರ ಅಂತ್ಯಕ್ರಿಯೆ ನಡೆಯಿತು. ಪ್ರಜ್ವಲ್ ರೇವಣ್ಣ ಜೈಲಿಂದ ಹೊರ ಬಂದು ನೇರವಾಗಿ ಭಾಗಿ ಯಾಗುವುದಿಲ್ಲ. ಬದಲಾಗಿ ವಿಡಿಯೋ

ಪುಟ 2ಕ್ಕೆ

## ಪ್ರಧಾನ್ ರಾಜೀನಾಮೆಗೆ ಅಮಿತ್ ಶಾ ಸೂಚನೆ?

**ನವದೆಹಲಿ:** ನೀಟ್ ಅಕ್ರಮದ ಹಿನ್ನೆಲೆಯಲ್ಲಿ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಒತ್ತಾಯಿಸಿ ಸಿಜೆಪಿ ಹಾಗೂ ಸೋನಮ್ ವಾಂಗ್ಚುಕ್ ಹೋರಾಟಕ್ಕೆ ಮಣಿದಿರುವ ಕೇಂದ್ರ ಸರ್ಕಾರ ಸಚಿವರ ರಾಜೀನಾಮೆ ಪಡೆಯಲು ಮುಂದಾಗಿದೆ.



ಸಿಜೆಪಿ ಪ್ರತಿಭಟನೆ ತೀವ್ರ ಸ್ವರೂಪ ಪಡೆಯುತ್ತಿದ್ದಂತೆ ಎಚ್ಚೆತ್ತುಕೊಂಡಿರುವ ಕೇಂದ್ರ ಸರ್ಕಾರ ಸಚಿವರ ರಾಜೀನಾಮೆ ಪಡೆಯುವ ಸಂಬಂಧ ಕೇಂದ್ರ ಗೃಹ ಸಚಿವ ಗೃಹ ಸಚಿವ ಅಮಿತ್ ಶಾ ಅವರು, ಧರ್ಮೇಂದ್ರ ಪ್ರಧಾನ್ ಅವರೊಂದಿಗೆ ಮಾತುಕತೆ

ಪುಟ 2ಕ್ಕೆ

# ಬರ: ಗುಳೆ ತಪ್ಪಿಸಲು ಕ್ರಮ

## ಗ್ರಾಮಗಳಲ್ಲಿಯೇ 125 ದಿನ ಉದ್ಯೋಗ: ಸಚಿವ ಈಶ್ವರ್ ಖಂಡ್ರೆ

**ಬೆಂಗಳೂರು:** ರಾಜ್ಯದ 178 ತಾಲೂಕುಗಳಲ್ಲಿ ಮಳೆ ಕೊರತೆ ಆಗಿದೆ. 60 ತಾಲೂಕುಗಳಲ್ಲಿ ತೀವ್ರ ಮಳೆ ಕೊರತೆ ಆಗಿದೆ. ಕುಡಿಯುವ ನೀರಿಗೆ ಪ್ರಥಮ ಆದ್ಯತೆ ನೀಡಲು ಮತ್ತು ಗುಳೆ ಹೋಗದಂತೆ ತಡೆಯಲು ಗ್ರಾಮಗಳಲ್ಲೇ ಉದ್ಯೋಗ ನೀಡಲು ಸೂಚಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಚೀಟಿ (ಜಾಬ್ ಕಾರ್ಡ್) ಹೊಂದಿರುವ ಪ್ರತಿಯೊಬ್ಬರಿಗೂ 125 ದಿನ ಉದ್ಯೋಗ ನೀಡಿಲಾಗುತ್ತದೆ. ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರು ಪೂರೈಕೆಗೆ 117 ಕೋಟಿ ಮುಂಗಡವಾಗಿ ಬಿಡುಗಡೆ ಮಾಡಿದ್ದೇವೆ. 95 ಕೋಟಿ ವೆಚ್ಚದ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

ಈ ತಿಂಗಳಾಂತ್ಯದೊಳಗೆ ವಿಬಿಜಿ ರಾಮ್ ಜಿ ಅಡಿ 10 ಲಕ್ಷ ಮಾನವ ದಿನ ಸೃಜಿಸಲಾಗುವುದು. ಪ್ರತಿ ತಿಂಗಳೂ 1 ಕೋಟಿಯಿಂದ 1.25 ಕೋಟಿ ಮಾನವ ದಿನ ಉದ್ಯೋಗ ಸೃಷ್ಟಿ ಗುರಿ ಇದೆ. ಮೊದಲ ತ್ರೈಮಾಸಿಕದಲ್ಲಿ 2900 ಕೋಟಿ ಬಿಡುಗಡೆ ಆಗಿದೆ. ಹೀಗಾಗಿ ಗ್ರಾಮೀಣ ಭಾಗದಲ್ಲಿ ಉದ್ಯೋಗದ ಸಮಸ್ಯೆ ಬರುವುದಿಲ್ಲ ಎಂದು ಈಶ್ವರ ಖಂಡ್ರೆ ತಿಳಿಸಿದರು.

ಪುಟ 2ಕ್ಕೆ



### ರಾಜ್ಯಗಳಿಗೆ ಕೇಂದ್ರದ ಹೊರೆ

**ಕೇಂದ್ರ ಸರ್ಕಾರ ಮನ್ರೇಗಾದಡಿ ನೀಡುತ್ತಿದ್ದ 90:10 ಅನುಪಾತ ಬದಲಿಸಿ ಜಿ ರಾಮ್ ಜಿ ಯೋಜನೆಯಡಿ 60:40 ಅನುಪಾತ ಮಾಡಿದೆ. ಇದು ರಾಜ್ಯದ ಮೇಲೆ ಹೊರೆಯಾಗಿದ್ದರೂ ಬಡವರ, ಗ್ರಾಮೀಣರ, ದಲಿತರ, ವಂಚಿತರ ಹಿತ ದೃಷ್ಟಿಯಿಂದ ಜುಲೈ 1ರಿಂದ ಯೋಜನೆ ಜಾರಿಗೆ ತಂದಿದೆ. ಈಗಾಗಲೇ 5 ಲಕ್ಷ ಮಾನವದಿನ ಉದ್ಯೋಗ ಸೃಷ್ಟಿಸಲಾಗಿದೆ. ರಾಜ್ಯದ ಗ್ರಾಮ ಪಂಚಾಯತಿಗೆ ಉದ್ಯೋಗ ಕೇಳಿ ಬಂದವರಿಗೆಲ್ಲಾ ಉದ್ಯೋಗ ನೀಡಲಾಗುವುದು ಎಂದು ಸಚಿವ ಈಶ್ವರ್ ಖಂಡ್ರೆ**

ಪುಟ 2ಕ್ಕೆ

# ನೀಟ್ ಗದ್ದಲ: ಸಂಸತ್ ಕಲಾಪ ಬಲಿ

## ಅಧಿವೇಶನದ ಮೊದಲ ದಿನವೇ ವಿಪಕ್ಷಗಳ ಹೋರಾಟ

**ನವದೆಹಲಿ:** ಸಂಸತ್ತಿನ ಮುಂಗಾರು ಅಧಿವೇಶನದ ಮೊದಲ ದಿನವೇ ಸದನದಲ್ಲಿ ನೀಟ್–ಯುಜಿ ಪರೀಕ್ಷಾ ಪತ್ರಿಕೆ ಸೋರಿಕೆ, ಅಯೋಧ್ಯೆ ರಾಮಮಂದಿರ ದೇಣಿಗೆ ಕಳ್ಳತನ ಮತ್ತು ಎಥೆನಾಲ್ ಮಿಶ್ರಣದ ವಿವಾದಗಳ ಕುರಿತು ಪ್ರತಿಪಕ್ಷಗಳು ಗದ್ದಲ ಎಬ್ಬಿಸಿದವು.

ಸಂಸತ್ತಿನ ಮುಂಗಾರು ಅಧಿವೇಶನ ಸೋಮವಾರ ಆರಂಭವಾಯಿತು. ಆದರೆ ಗದ್ದಲದ ಹಿನ್ನೆಲೆಯಲ್ಲಿ ಮೊದಲ ದಿನವೇ ಉಭಯ ಸದನಗಳನ್ನು ಮಂಗಳವಾರಕ್ಕೆ ಮುಂದೂಡಲಾಯಿತು.

ಬಂಡಾಯ ಟಿಎಂಸಿ ಸಂಸದರನ್ನು ಸರ್ವಪಕ್ಷ ಸಭೆಗೆ ಕರೆದ ನಂತರ ವಿರೋಧ ಪಕ್ಷದ ಸಭಾತ್ಯಾಗ ಅಧಿವೇಶನ ಪ್ರಾರಂಭವಾಗುವ ಮೊದಲೇ ರಾಜಕೀಯ ತಾಪಮಾನವನ್ನು ಹೆಚ್ಚಿಸಿತ್ತು. ಸಂಸತ್ತಿನ ಮಳೆಗಾಲದ ಅಧಿವೇಶನ ಗಣನೀಯ ಗದ್ದಲದೊಂದಿಗೆ ಪ್ರಾರಂಭವಾಗಿದೆ. ನೀಟ್ ಪತ್ರಿಕೆ ಸೋರಿಕೆ ಮತ್ತು ರಾಮ ಮಂದಿರ ವಿವಾದದಂತಹ ವಿಷಯಗಳ ಬಗ್ಗೆ ವಿರೋಧ ಪಕ್ಷಗಳು ಭಾರಿ ಗದ್ದಲವನ್ನು ಸೃಷ್ಟಿಸಿವೆ. ಇದು ಲೋಕಸಭೆ ಮತ್ತು ರಾಜ್ಯಸಭೆ ಎರಡರಲ್ಲೂ ಪದೇ ಪದೇ ಮುಂದೂಡಿಕೆಗೆ ಕಾರಣವಾಯಿತು.



ಸಂಸತ್ತಿನ ಮುಂಗಾರು ಅಧಿವೇಶನ ಆಗಸ್ಟ್ 13 ರವರೆಗೆ ನಡೆಯಲಿದೆ. ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಶಿವಸೇನೆ (ಯುಬಿಟಿ) ಪಕ್ಷಾಂತರ ನಂತರ ಎರಡೂ ಸದನಗಳು ಬದಲಾದ ರಾಜಕೀಯ ಅಂಕಗಣಿತಕ್ಕೆ ಸಾಕ್ಷಿಯಾಗಿತ್ತು. ಅಧಿವೇಶನದಲ್ಲಿ ಮೋದಿ ಸರ್ಕಾರ ಹಲವಾರು ಪ್ರಮುಖ ಮಸೂದೆಗಳನ್ನು ಮಂಡಿಸಲಿದೆ.

ಪುಟ 2ಕ್ಕೆ

### ಧ್ವನಿ ಅಡಗಿಸಲು ಕೇಂದ್ರದಿಂದ ಪೊಲೀಸ್ ಶಕ್ತಿ ಬಳಕೆ: ಖರ್ಗೆ

**ನವದೆಹಲಿ:** ಜಂತರ್ ಮಂತರ್‌ನಲ್ಲಿ ಶಾಂತಿಯುತವಾಗಿ ಚಲೋ ಸಂಸತ್ ಮೆರವಣಿಗೆ ನಡೆಸಲು ಮುಂದಾದ ನೀಟ್ ಅಭ್ಯರ್ಥಿಗಳು, ವಿದ್ಯಾರ್ಥಿಗಳ ಮೇಲೆ ದೆಹಲಿ ಪೊಲೀಸರು ಬಲಪ್ರಯೋಗ ಹಾಗೂ ಲಾಠಿಚಾರ್ಜ್ ನಡೆಸಿರುವುದನ್ನು ರಾಜ್ಯಸಭೆಯಲ್ಲಿ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಖಂಡಿಸಿ ವಾಗ್ದಾಳಿ ನಡೆಸಿದರು.

ಸಂಸತ್ತಿನ ಮುಂಗಾರು ಅಧಿವೇಶನದ ಮೊದಲ ದಿನವೇ ನೀಟ್ ಪರೀಕ್ಷೆ ಅಕ್ರಮ ಹಾಗೂ ಜಂತರ್ ಮಂತರ್‌ನಲ್ಲಿ ಪ್ರತಿಭಟನಾಕಾರರ ಮೇಲೆ ನಡೆದ

ಪುಟ 2ಕ್ಕೆ

# ಎಸ್.ಐ.ಆರ್. ಪ್ರಕ್ರಿಯೆ ಪ್ರಗತಿ ಪರಿಶೀಲಿಸಿದ ರಾಜ್ಯ ಮುಖ್ಯ ಚುನಾವಣಾಧಿಕಾರಿ ಅನ್ಬುಕುಮಾರ್



ಮೈಸೂರು: ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಗಳ ಪ್ರಗತಿ ಪರಿಶೀಲಿಸಿದರು.

ಬಿ.ಎಲ್.ಓಗಳು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ಸಂಪೂರ್ಣ ಪಾರದರ್ಶಕತೆಯಿಂದ ನಿರ್ವಹಿಸಬೇಕು. ಮತದಾರರ ನೋಂದಣಾಧಿಕಾರಿಗಳು ತಮ್ಮ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಭೇಟಿ ನೀಡಿ ಮತದಾರರ ಪಟ್ಟಿ ಪರಿಷ್ಕರಣೆಯ ಪ್ರಕ್ರಿಯೆಯನ್ನು ಪರಿಶೀಲಿಸಬೇಕು. ಎಸ್.ಐ.ಆರ್ ಕಾರ್ಯವನ್ನು ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಗಂಭೀರವಾಗಿ ಪರಿಗಣಿಸಿ ಹೆಚ್ಚಿನ ನಿಗಾ ವಹಿಸಿ ಕೆಲಸ ನಿರ್ವಹಿಸಬೇಕು. ದೋಷರಹಿತ ಹಾಗೂ ಗುಣಮಟ್ಟದ ಮತದಾರರ ಪಟ್ಟಿಯನ್ನು ಸಿದ್ದಪಡಿಸುವ ನಿಟ್ಟಿನಲ್ಲಿ ವಿವರಗಳನ್ನು ಅತ್ಯಂತ ಎಚ್ಚರಿಕೆಯಿಂದ ಪರಿಶೀಲಿಸಬೇಕು. ಯಾವ ಮತಗಟ್ಟೆಗಳಲ್ಲಿ ಕಡಿಮೆ ಪ್ರಗತಿ ಆಗಿದೆಯೋ ಅಂತಹ ಪ್ರದೇಶಗಳ ಕಡೆ ಹೆಚ್ಚಿನ ಗಮನಹರಿಸಿ ಸೂಕ್ತ ಮಾರ್ಗದರ್ಶನ ನೀಡಿ ಪ್ರಗತಿ ವೇಗವಾಗಿ ಆಗುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಿ ಎಂದರು.

ಮತದಾರರ ನೋಂದಣಾಧಿಕಾರಿಗಳು ನೋಂದಾಯಿತ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆ ನಡೆಸಿ ಹಾಗೂ ಬಿ.ಎಲ್.ಓ ಗಳು ನೋಂದಾಯಿತ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಂದ ನೇಮಕ ಮಾಡಿರುವ ಬಿ.ಎಲ್.ಎ-2 ಗಳೊಂದಿಗೆ ಸಭೆ ನಡೆಸಿ ಎಸ್ಐಆರ್ ಕಾರ್ಯದ ಪ್ರಗತಿ ವರದಿಯನ್ನು ಹಾಗೂ ಗೈರು, ಸ್ಥಳಾಂತರ, ಮರಣ, ಪುನರಾವರ್ತಿತ ಹಾಗೂ ಇತರೆ ಎಂದು ಗುರುತು ಮಾಡಿರುವ ಮತದಾರರ ವಿವರಗಳನ್ನು ಪ್ರತಿವಾರ ನೀಡುವಂತೆ ಸೂಚನೆಯನ್ನು ನೀಡಿದರು. ಮುಂದಿನ ಹಂತದಲ್ಲಿ ಪರಿಷ್ಕರಣೆಯ ಕಾರ್ಯವನ್ನು ಕೈಗೊಳ್ಳುವ ಕುರಿತು, ನಿಗದಿತ ಕಾಲಮಿತಿಯಲ್ಲಿ ಪರಿಷ್ಕರಣೆಯ ಕಾರ್ಯಗಳನ್ನು ಪೂರ್ಣಗೊಳಿಸಲು ಸೂಚನೆಗಳನ್ನು ನೀಡಿದರು.ಪರಿಷ್ಕರಣೆಯ ಕಾರ್ಯದ ಸಂಬಂಧ ಜಿಲ್ಲೆಯ ಮತದಾರರ ನೋಂದಣಾಧಿಕಾರಿಗಳು ಮತ್ತು ಸಹಾಯಕ ಮತದಾರರ ನೋಂದಣಾಧಿಕಾರಿಗಳಲ್ಲಿ ಇದ್ದ ಗೊಂದಲಗಳು ಹಾಗೂ ಪ್ರಶ್ನೆಗಳಿಗೆ ಪರಿಹಾರಗಳನ್ನು ಸೂಚಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ.ಜಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ಮಹಾನಗರಪಾಲಿಕೆ ಆಯುಕ್ತೆ ಎಂ.ಕೆ.ಸವಿತ, ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಇತರರು ಹಾಜರಿದ್ದರು.

## ಜಾನಕಿಯವರ ಸಂಗೀತಸೇವೆ ಅವಿಸ್ಮರಣೀಯ: ಜಯಪ್ಪ ಹೊನ್ನಾಳಿ

ಮೈಸೂರು: ಎಸ್. ಜಾನಕಿ ಅವರ ಸಂಗೀತ ಸೇವೆ ಅಸ್ಮರಣೀಯ ಎಂದು ಕವಿ ಜಯಪ್ಪ ಹೊನ್ನಾಳಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದಿಂದ ಸೋಮವಾರ ನಡೆದ ಗಾನಕೋಗಿಲೆ ಎಸ್. ಜಾನಕಿ ಅವರಿಗೆ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದರು ಜಾನಕಿಯವರ ಮೇರು ವ್ಯಕ್ತಿತ್ವದ ಸಂಗೀತ ಪ್ರತಿಭೆ. ಅತ್ಯುನ್ನತ ಸಾಧಕಿ. ಸಂಗೀತ ಲೋಕದ ಧ್ರುವತಾರೆ. ಗಾಯನ ಕಲೆ ಕರಗತವಾಗಿತ್ತು. 48 ಸಾವಿರ ಹಾಡು ಹಾಡಿರುವುದು ಸಾಮಾನ್ಯ ವಿಷಯವಲ್ಲ. ಅವರ ಹಾಡುಗಳು ಎಂದಿಗೂ ಮರೆಯಲು ಸಾಧ್ಯವಿಲ್ಲ. 20 ಭಾಷೆಗಳಲ್ಲಿ ಹಾಡಿರುವ ಅವರು ಜಗದ ಗಾಯಕಿ ಎಂದು ಬಣ್ಣಿಸಿದರು.

ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್ ಮಾತನಾಡಿ, ಎಸ್.ಜಾನಕಿ ವಿಶ್ವ ವಿಖ್ಯಾತ ಗಾಯನ ಪ್ರತಿಭೆ. ಊಹೆಗೂ ನಿಲುಕದ ರೀತಿಯಲ್ಲಿ ಹಾಡು ಹಾಡಿರುವುದು ಅಚ್ಚರಿ ಎಂದರು. ಮೂಗೂರು ನಂಜುಂಡಸ್ವಾಮಿ ಮಾತನಾಡಿದರು. ವಕೀಲರಾದ ತನುಜ ಮಹೇಶ್, ಬಿಜೆಪಿ ಮುಖಂಡ ಜಿ.ಗೋಪಾಲ್ ಮಾತನಾಡಿದರು. ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ, ವೀರಭದ್ರಸ್ವಾಮಿ ಇದ್ದರು.

# ವಕೀಲ ಜೆ.ಪಿ.ಶೇಖರ್‌ಗೆ ಅಭಿನಂದನೆ



**ಹಾಸನ:** ಕರ್ನಾಟಕ ರಾಜ್ಯ ವಕೀಲರ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿರುವ ಹಾಸನ ಜಿಲ್ಲಾ ವಕೀಲರ ಸಂಘದ ಹಿರಿಯ ವಕೀಲ ಜೆ.ಪಿ.ಶೇಖರ್ ಅವರಿಗೆ ಜಿಲ್ಲಾ ವಕೀಲರ ಸಂಘದ ವತಿಯಿಂದ ನಗರದ ಜಿಲ್ಲಾ ನ್ಯಾಯಾಲಯ ಆವರಣದಲ್ಲಿರುವ ವಕೀಲರ ಸಂಘದ ಸಭಾಂಗಣದಲ್ಲಿ ಅಭಿನಂದನಾ ಸಮಾರಂಭ ಆಯೋಜಿಸಲಾಗಿತ್ತು.

ನ್ಯಾಯಾಧೀಶರು, ಹಿರಿಯ ವಕೀಲರು, ವಿವಿಧ ಸಂಘ-ಸಂಸ್ಥೆಗಳ ಮುಖಂಡರು ಹಾಗೂ ಜಿಲ್ಲೆಯ ನೂರಾರು ವಕೀಲರು ಪಾಲ್ಗೊಂಡು ಶೇಖರ್ ಅವರನ್ನು ಸನ್ಮಾನಿಸಿ ಶುಭ ಹಾರೈಸಿದರು. ಕಳೆದ ಮಾರ್ಚ್ 11ರಂದು ನಡೆದ ಕರ್ನಾಟಕ ರಾಜ್ಯ ವಕೀಲರ ಪರಿಷತ್ ಚುನಾವಣೆಯಲ್ಲಿ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಿ ರಾಜ್ಯ ಮಟ್ಟದಲ್ಲಿ ಗಮನಾರ್ಹ ಗೆಲುವು ಸಾಧಿಸಿದ ಜೆ.ಪಿ.ಶೇಖರ್ ಅವರ ಸಾಧನೆಯನ್ನು ಗೌರವಿಸುವ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಹೇಮಾವತಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಉದ್ಘಾಟನೆಯ ಬಳಿಕ ಮಾತನಾಡಿದ ಅವರು, ಜೆ.ಪಿ.ಶೇಖರ್ ಅವರು ಸದಾ ಸರಳತೆ ಮತ್ತು ನಗುಮುಖದಿಂದ ಎಲ್ಲರೊಂದಿಗೆ ಬೆರೆಯುವ ವ್ಯಕ್ತಿತ್ವ ಹೊಂದಿದ್ದಾರೆ. ವೃತ್ತಿ ಜೀವನದಲ್ಲಿ ತೋರಿದ ಶ್ರದ್ಧೆ, ಪ್ರಾಮಾ ಣಿಕತೆ ಹಾಗೂ ಸಹೃದಯತೆ ಅವರ ಯಶಸ್ಸಿಗೆ ಕಾರಣವಾಗಿದೆ. ರಾಜ್ಯ ವಕೀಲರ ಪರಿಷತ್ ಸದಸ್ಯರಾಗಿ ಆಯ್ಕೆಯಾದ ನಂತರ ವಕೀಲ ಸಮುದಾಯ ನಿಮ್ಮ ಮೇಲೆ ಅಪಾರ ನಿರೀಕ್ಷೆ ಇಟ್ಟಿದೆ. ಆ ನಿರೀಕ್ಷೆಗಳಿಗೆ ತಕ್ಕಂತೆ ಸೇವೆ ಸಲ್ಲಿಸಿ, ವಕೀಲರ ಧ್ವನಿಯಾಗಿ ಕಾರ್ಯನಿರ್ವಹಿಸಬೇಕು ಎಂದು ಶುಭ ಹಾರೈಸಿದರು.

ಜಿಲ್ಲಾ ಒಕ್ಕಲಿಗ ಸಂಘದ ಅಧ್ಯಕ್ಷ ಜಿ.ಎಲ್. ಮುದ್ದೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಎಲ್. ಮಲ್ಲೇಶ್ ಗೌಡ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಕಾರ್ಲೆ ಮೊಗಣ್ಣಗೌಡ ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಕೀಲರ ಸಂಘದ ಜಂಟಿ ಕಾರ್ಯದರ್ಶಿ ಎ.ಜೆ.ರಘು, ಖಜಾಂಚಿ ಜಿ.ಎನ್.ಸುಗುಣ, ಮಂಡ್ಯ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಟಿ.ಎನ್. ಸತ್ಯಾನಂದ, ಎಪಿಎಂಸಿ ಮಾಜಿ ಅಧ್ಯಕ್ಷ ಹುಲಿಹಳ್ಳಿ ನಟರಾಜು ಉಪಸ್ಥಿತರಿದ್ದರು. ವಕೀಲೆ ಹಂಸ ಎನ್.ನಟರಾಜು ಕಾರ್ಯಕ್ರಮವನ್ನು ನಿರೂಪಿಸಿದರು.

# ಪೆಡ್ಲರ್ ಬಂಧನ: ಗಾಂಜಾ ವಶ

**ಸಕಲೇಶಪುರ:** ತಾಲೂಕಿನಲ್ಲಿ ಗುಪ್ತವಾಗಿ ನಡೆಯುತ್ತಿದ್ದ ಅಕ್ರಮ ಮಾದಕ ವಸ್ತುಗಳ ದಂಧೆಗೆ ಸಕಲೇಶಪುರ ನಗರ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಪೊಲೀಸರು ಭರ್ಜರಿ ಹೊಡೆತ ನೀಡಿದ್ದಾರೆ. ಅಪರಾಧ ವಿಭಾಗದ ಪಿಎಸ್ಐ ಕೃಷ್ಣಪ್ಪ ನೇತೃತ್ವದ ತಂಡ ನಡೆಸಿದ ಕಾರ್ಯಾಚರಣೆಯಲ್ಲಿ 2 ಕೆಜಿ 400 ಗ್ರಾಂ ಗಾಂಜಾವನ್ನು ಜಪ್ತಿ ಮಾಡಿ, ಅಸ್ಸಾಂ ಮೂಲದ ಪೆಡ್ಲರ್‌ನನ್ನು ಬಂಧಿಸಲಾಗಿದೆ.

ನಗರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ವನರಾಜು ವಿ.ಸಿ. ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಿದ ಪಿಎಸ್ಐ ಕೃಷ್ಣಪ್ಪ ಅವರ ತಂಡ, ನಗರ ಠಾಣೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ಗಾಂಜಾ ಮಾರಾಟದಲ್ಲಿ ತೊಡಗಿದ್ದ ಅಸ್ಸಾಂ ಮೂಲದ ಮೈನುಲ್ ಹಕ್ ಬಿನ್ ಮನ್ನಾಸ್ ಆಲಿ ಎಂಬಾತನನ್ನು ಬಂಧಿಸಿದ್ದಾರೆ.

ಬಂಧಿತ ಆರೋಪಿಯಿಂದ ಸುಮಾರು 2 ಕೆಜಿ 400 ಗ್ರಾಂ ಗಾಂಜಾವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಆರೋಪಿಯ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಳಿಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕಾರ್ಯಾಚರಣೆಯಲ್ಲಿ ಪೊಲೀಸ್ ಸಿಬ್ಬಂದಿ ರೇವಣ್ಣ, ಶ್ರೀಧರ್, ಅಶೋಕ್, ಮಧು ಹಾಗೂ ಹೆಡ್ ಕಾನ್‌ಸ್ಟೆಬಲ್ ಸುನಿಲ್ ಭಾಗವಹಿಸಿದ್ದರು.



# ಬೈರಮಂಗಲ: ನಿಷೇಧಾಜ್ಞೆ ಜಾರಿಗೊಳಿಸಿ

## ದಲಿತ ಸಂಘರ್ಷ ಸಮಿತಿ ಆಗ್ರಹ | ಹೋರಾಟದ ನೆಪದಲ್ಲಿ ಅನ್ಯ ಜಿಲ್ಲೆಗಳ ವ್ಯಕ್ತಿಗಳು ?

ರಾಮನಗರ: ಬಿಡದಿ ಸಮಗ್ರ ನಗರ ಯೋಜನೆಯ ವಿರುದ್ಧ ಮತ್ತು ಪರವಾದ ಹೋರಾಟಗಾರರ ನೆಪದಲ್ಲಿ ಅನ್ಯ ಜಿಲ್ಲೆಗಳಿಂದ ಬರುವವರಿಂದ ಈ ಭಾಗದಲ್ಲಿ ವಾಸಿಸುತ್ತಿರುವ ದಲಿತರು ಮತ್ತು ರೈತರಿಗೆ ತೊಂದರೆಯಾಗುವ ಸಾಧ್ಯತೆಗಳಿರುವುದರಿಂದ ಬೈರ ಮಂಗಲದಲ್ಲಿ 114ನೇ ಸೆಕ್ಷನ್ ಜಾರಿ ಮಾಡಬೇಕು ಎಂದು ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ಭೂ ಸ್ವಾಧೀನದ ಪರ ಹಾಗೂ ವಿರೋಧದ ಹೋರಾಟ ತಾರಕಕ್ಕೇರಿರುವ ಹಿನ್ನೆಲೆಯಲ್ಲಿ ರೈತರು, ದಲಿತರು, ಮಹಿಳೆಯರು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಭೈರಮಂಗಲ ಗ್ರಾಮದಲ್ಲಿ ಶೀಘ್ರವೇ ನಿಷೇಧಾಜ್ಞೆ ಜಾರಿಗೊಳಿಸಬೇಕೆಂದು ಎಂದು ಸಂಘಟನೆಯ ಪದಾಧಿಕಾರಿಗಳು ಜಿಲ್ಲಾಡಳಿವನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ಮಾಧ್ಯಮ ಪ್ರತಿನಿಧಿಗಳ ಬಳಿ ಮಾತನಾಡಿದ ಡಿಎಸ್‌ಎಸ್ ಜಿಲ್ಲಾಧ್ಯಕ್ಷ ನಿಖಿಲ್ ಸಜ್ಜೆ ನಿಂಗಯ್ಯ, ಬಿಡದಿ ಹೋಬಳಿ ಭೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಪ್ರದೇಶದಲ್ಲಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸಮಗ್ರ ಉಪನಗರ ಯೋಜನೆ (ಟೌನ್ ಶಿಪ್) ನಿರ್ಮಾಣ ಸಂಬಂಧ ಭೂ ಸ್ವಾಧೀನ ಪ್ರಕ್ರಿಯೆ ಸಂಬಂಧ ಒಟ್ಟು 7 ಗ್ರಾಮಗಳ ಭೂ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಕೂಡ ಪ್ರಕಟವಾಗಿದೆ.

ಭೂ ಸ್ವಾಧೀನ ಪ್ರಕ್ರಿಯೆ ಸಂಬಂಧದ ಪರ ಮತ್ತು ವಿರುದ್ಧದ ಪ್ರತಿಭಟನೆಗಳು ಹಲವು ದಿನಗಳಿಂದ ನಡೆಯುತ್ತಿವೆ. ಈ ಹೋರಾಟವನ್ನು ಬೆಂಬಲಿಸುವ ನೆಪದಲ್ಲಿ ಕೆಲವು ಸಮಾಜಘಾತುಕ ಶಕ್ತಿಗಳು ಹಾಗೂ ರೌಡಿಗಳು ರೈತರ ವೇಷದಲ್ಲಿ ಭೈರಮಂಗಲ ಗ್ರಾಮಕ್ಕೆ ಬರುತ್ತಿದ್ದು ರೈತರನ್ನು ಪ್ರಚೋದಿಸಿ ಹೋರಾಟದ ದಿಕ್ಕನ್ನು ತಪ್ಪಿಸುವ ಕಲಸ ಮಾಡುತ್ತಿದ್ದಾರೆ. ಅಲ್ಲದೆ ಯೂಟ್ಯೂಬರ್ ಸೋಗಿನಲ್ಲಿ ಕೆಲವು ಅಪರಿಚಿತರು ಅಮಾಯಕ ರೈತರ ಮನೆಮನೆಗೆ ಹೋಗುತ್ತಿರುವುದು ಕಂಡುಬರುತ್ತಿದೆ ಎಂದು ಅನುಮಾನ ವ್ಯಕ್ತಪಡಿಸಿದ್ದಾರೆ.

ಮನವಿ ಸಲ್ಲಿಕೆ ವೇಳೆ ಬಿಡದಿ ಪುರಸಭೆ ಮಾಜಿ ಸದಸ್ಯ ಶಿವಕುಮಾರ್, ರೈತರ ಸೇವಾ ಸಹಕಾರ ಸಂಘದ ನಿರ್ದೇಶಕ ರಮೇಶ್, ದಲಿತ ಮುಖಂಡರಾದ ಹರೀಶ್‌ಬಾಲು, ವೆಂಕಟೇಶ್, ಸದಾಕುಮಾರ್, ಸಂತೋಷ್, ಸಂಜಯ್ ಇದ್ದರು.



**ಹೊರ ರಾಜ್ಯ ಹಾಗೂ ಜಿಲ್ಲೆಗಳಿಂದ ಸುದ್ದ ಮಾಧ್ಯಮ ದವರೆಂದು ಹೇಳಿಕೊಂಡು ಲೋಗೋ ಹಿಡಿದು ಬರುವ ಆಸಾಮಿಗಳು ಬಲವಂತವಾಗಿ ರೈತರಿಂದ ವ್ಯತಿರಿಕ್ತ ಹೇಳಿಕೆ ರೆಕಾರ್ಡ್ ಮಾಡಿ ಪ್ರಚರಿಸುವ ಮೂಲಕ ಸಮಾಜಕ್ಕೆ ಮತ್ತು ರಾಜ್ಯದ ಜನರಿಗೆ ತಪ್ಪು ಸಂದೇಶ ರವಾನಿಸುವ ಕೆಲಸ ಮಾಡುತ್ತಿದ್ದಾರೆಂದು ಇದಕ್ಕಾಗಿ ಒಂದು ಜಾಲವೇ ಟೊಂಕ ಕಟ್ಟಿ ನಿಂತಿದೆ ಎಂದು ಹೇಳಲಾಗುತ್ತಿದೆ. ಈ ಬೆಳವಣಿಗೆಗಳು ಮುಂದಿನ ದಿನಗಳಲ್ಲಿ ಅಪರಾಧ ಕೃತ್ಯಗಳು ನಡೆಯಲು ಕಾರಣ ವಾಗಬಹುದೆಂದು ದಲಿತ ಹಾಗೂ ರೈತ ಕುಟುಂಬ ಗಳು ಆತಂಕ ವ್ಯಕ್ತಪಡಿಸುತ್ತಿದ್ದಾರೆ ಎಂದರು. ಇದೇ ಜುಲೈ 11ರ ಶನಿವಾರ ಭೈರಮಂಗಲ ಗ್ರಾಮಕ್ಕೆ ಹತ್ತಾರು ಬಸ್‌ಗಳು ಮತ್ತು ವಾಹನಗಳಲ್ಲಿ ಬೇರೆ ಜಿಲ್ಲೆಗಳಿಂದ ನೂರಾರು ಜನರು ರೈತರ ಹೋರಾಟವನ್ನು ಬೆಂಬಲಿಸುವ ನೆಪದಲ್ಲಿ ಜಮಾಯಿಸಿದ್ದರು. ಅಂದು ರೈತರನ್ನು ಪ್ರಚೋದಿಸಿದ ಕಾರಣ ಗ್ರಾಮದಲ್ಲಿ ಅಕ್ಷರಸಹ ಉದ್ವಿಗ್ನ ವಾತಾವರಣ ಉಂಟಾಗಿತ್ತು. ಪೊಲೀಸರ ಮಧ್ಯ ಪ್ರವೇಶದಿಂದ ಅಂದು ಸ್ವಲ್ಪದರಲ್ಲಿ ಘರ್ಷಣೆ ಆಗುವುದು ತಪ್ಪಿತು ಎಂದು ಅವರು ತಮ್ಮ ಮನವಿಯನ್ನು ಸಮರ್ಥಿಸಿಕೊಂಡರು.**

### ಸಮಾಜಘಾತುಕರಿಂದ ಹಿಂಸಾಚಾರ

ಜುಲೈ 13ರ ಸೋಮವಾರ ಭೈರಮಂಗಲ ಗ್ರಾಮದಲ್ಲಿ ಪ್ರತಿಭಟನೆ ಮಾಡುತ್ತಿದ್ದ ರೈತರನ್ನು ಸಮಾಜಘಾತುಕ ಶಕ್ತಿಗಳು ಎತ್ತಿಕಟ್ಟಿ ಮಂಡಲಹಳ್ಳಿ ಗ್ರಾಮದಲ್ಲಿ ಸರ್ವೇ ಕಾರ್ಯಕ್ಕೆ ಬಂದಿದ್ದ ಅಧಿಕಾರಿಗಳ ಮೇಲೆ ಹಲ್ಲೆ ನಡೆಸುವ ಮೂಲಕ ಹಿಂಸಾಚಾರಕ್ಕೆ ಕಾರಣರಾಗಿದ್ದಾರೆ. ಇದರಿಂದ ಸ್ಥಳೀಯವಾಗಿ ರೈತ ಕುಟುಂಬ ಹಾಗೂ ದಲಿತ ಕುಟುಂಬಗಳು ಭಯಭೀತರಾಗಿದ್ದಾರೆ. ಸ್ಥಳೀಯ ರೈತರಿಗೆ ಇಲ್ಲಸಲ್ಲದ ಸುಳ್ಳುಗಳನ್ನು ಹೇಳಿ ದಿಕ್ಕುತಪ್ಪಿಸುವ ಜತೆಗೆ ಸಮಾಜದಲ್ಲಿ ಸಾಮರಸ್ಯ ಕೆಡಿಸಿ ಶಾಂತಿಭಂಗ ಉಂಟುಮಾಡುವ ಪ್ರಯತ್ನ ನಡೆಯುತ್ತಿದೆ. ಆದ್ದರಿಂದ ಹೋರಾಟ ಮಾಡುತ್ತಿರುವ ಸ್ಥಳೀಯ ರೈತರನ್ನು ಹೊರತುಪಡಿಸಿ ಹೊರಗಡೆಯಿಂದ ಬರುವವರನ್ನು ಹೋರಾಟಕ್ಕೆ ನಿರ್ಬಂಧಿಸಬೇಕು. ಹಾಗೆಯೇ ಯೂಟೂಬರ್, ಸುದ್ದಿ ಮಾಧ್ಯಮದವರೆಂದು ಮನೆಗಳಿಗೆ ಹೋಗುವವರ ಮೇಲೆ ನಿಗಾವಹಿಸಬೇಕು. ಗ್ರಾಮದಲ್ಲಿ ಉಂಟಾಗಬಹುದಾದ ಗಲಭೆಯನ್ನು ತಪ್ಪಿಸುವ ಸದುದ್ದೇಶದಿಂದ ಹಾಗೂ ಅಮಾಯಕ ರೈತರು ಮತ್ತು ದಲಿತ ಕುಟುಂಬಗಳ ರಕ್ಷಣೆಯ ಕಾರಣದಿಂದ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಭೈರಮಂಗಲ ಗ್ರಾಮದಲ್ಲಿ ಸೆಕ್ಷನ್ 144ರ ನಿಷೇಧಾಜ್ಞೆ ಜಾರಿಗೊಳಿಸಬೇಕೆಂದು ಜಿಲ್ಲಾಡಳಿತಕ್ಕೆ ಮನವಿಪತ್ರ ಸಲ್ಲಿಸಲಾಗಿದೆ ಎಂದು ನಿಖಿಲ್ ಸಜ್ಜೆನಿಂಗಯ್ಯ ತಿಳಿಸಿದರು.

# ಕೇಂದ್ರ-ರಾಜ್ಯಸರ್ಕಾರಗಳ ಆಡಳಿತ ವೈಫಲ್ಯ ಖಂಡಿಸಿದ ವಾಟಾಳ್

ರಾಮನಗರ: ನೀಟ್ ಪರೀಕ್ಷೆಯ ವೈಫಲ್ಯದ ಆರೋಪವನ್ನು ಹೊರೆಸಿ ಕೇಂದ್ರ ಸರ್ಕಾರವನ್ನು ಹಾಗೂ ರಾಜ್ಯದಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ ಎಂದು ಆರೋಪಿಸಿ ರಾಜ್ಯ ಸರ್ಕಾರದ ವಿರುದ್ಧ ಹರಿಹಾಯ್ದ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ನಗರದಲ್ಲಿ ಈಡುಗಾಯಿ ಚಳವಳಿ ನಡೆಸಿದರು.

ನಗರದ ಬಸ್ ನಿಲ್ದಾಣದಲ್ಲಿ ಕನ್ನಡ ಚಳವಳಿ ವಾಟಾಳ್ ಪಕ್ಷ ಮತ್ತು ಕರುನಾಡ ಸೇನೆಯ ಕಾರ್ಯಕರ್ತರೊಂದಿಗೆ ಈಡುಗಾಯಿ ಹೊಡೆದು ಪ್ರತಿಭಟಿಸಿದ ವಾಟಾಳ್ ನಾಗರಾಜ್, ನೀಟ್ ಪರೀಕ್ಷೆಯನ್ನು ಪ್ರಾಮಾಣಿಕವಾಗಿ ನಡೆಸಲು ಕೇಂದ್ರ ಸರ್ಕಾರ ವಿಫಲವಾಗಿದೆ. ಹಲವಾರು ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ವಾಕ್ಸಮರ ನಡೆಸಿದರು.

ಕೇಂದ್ರ ಸರ್ಕಾರದ ಶಿಕ್ಷಣ ಸಚಿವ ಧರ್ಮೇಂದ್ರ ಅವರ ರಾಜೀನಾಮೆಗೆ ಒತ್ತಾಯಿಸಿ ಹಿರಿಯ ಹೋರಾಟಗಾರ ಸೋನಮ್ ವಾಂಗ್ಚುಕ್ ಪ್ರತಿಭಟನೆ ನಡೆಸುತ್ತಿದ್ದಾರೆ. ಆದರೆ ಕೇಂದ್ರ ಸರ್ಕಾರವು ಇವರ ಸತ್ಯಾಗ್ರಹವನ್ನು ಹತ್ತಿಕ್ಕಲು ಪ್ರಯತ್ನಪಟ್ಟಿದೆ ಎಂದು ದೂರಿದರು.

ನೀಟ್ ಪರೀಕ್ಷೆಯ ವೈಫಲ್ಯವನ್ನು ಖಂಡಿಸಿ ಕಳೆದ 20 ದಿನಗಳಿಂದ ಹಿರಿಯ ಸೋನಮ್ ವಾಂಗ್ಚುಕ್ ಸತ್ಯಾಗ್ರಹ ನಡಸುತ್ತಿದ್ದಾರೆ. ಪ್ರತಿಭಟನೆಯ ಸ್ಥಳಕ್ಕೆ ಆಗಮಿಸಿದ ಮಫ್ತಿಯಲ್ಲಿದ್ದ ಪೊಲೀಸರು ಅವರನ್ನು ಬಟ್ಟೆಯಲ್ಲಿ ಸುತ್ತಿಕೊಂಡು ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಈ ಘಟನೆಯು ಕೊಲೆಗಿಂತ, ದರೋಡೆಗಿಂತಲೂ ಘೋರ. ಈ ಕೂಡಲೆ ಕೇಂದ್ರದ ಸಚಿವ ಧರ್ಮೇಂದ್ರ ಪ್ರಧಾನ್ ಕೂಡಲೇ ರಾಜೀನಾಮೆ ಸಲ್ಲಿಸಲೇಬೇಕು ಎಂದರು.



### ಯುವಕರ ಬಗ್ಗೆ ಪ್ರಾಮಾಣಿಕ ಚಿಂತನೆ ಇಲ್ಲದ ಕೇಂದ್ರ

ದೇಶದಲ್ಲಿ ಉದ್ಯೋಗವಿಲ್ಲದೆ ಯುವ ಸಮುದಾಯ ದಾರಿತಪ್ಪುತ್ತಿದ್ದಾರೆ. ಯುವಕರ ಭವಿಷ್ಯದ ಬಗ್ಗೆ ಕೇಂದ್ರ ಸರ್ಕಾರದಿಂದ ಪ್ರಾಮಾಣಿಕ ಚಿಂತನೆ ನಡೆದಿಲ್ಲ. ರಾಜ್ಯದಲ್ಲಿ ಲಕ್ಷಾಂತರ ಜನ ವಿದ್ಯಾರ್ಥಿಗಳು ಪದವೀಧರರಾಗಿ ಹಳ್ಳಿಗಳಲ್ಲಿ ಕೆಲಸವಿಲ್ಲದೇ ನೋವಿನಿಂದ ನರಳುತ್ತಿದ್ದಾರೆ. ರಾಜ್ಯ ಸರ್ಕಾರ ಇವರಿಗೆ ಕೆಲಸ ಕೊಡಬೇಕೆಂಬ ಎಂಬ ಜವಾಬ್ದಾರಿಯನ್ನು ಮರೆತಂತಿದೆ ಎಂದರು.

### ರಾಜ್ಯದಲ್ಲಿನ ಆಡಳಿತದ ವಿರುದ್ಧವೂ ಬೇಸರ

ರಾಜ್ಯದಲ್ಲೆಡೆ ತೀವ್ರ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ರಾಜ್ಯಾದ್ಯಂತ ಎಲ್ಲ ಕಡೆ ಖಾಸಗಿ ಆಸ್ಪತ್ರೆಗಳಲ್ಲಿ ಹಾಗೂ ಖಾಸಗಿ ವಿದ್ಯಾಸಂಸ್ಥೆಗಳು ಸೇವೆಯ ಬದಲಿಗೆ ವ್ಯಾಪಾರ ಮಾಡುತ್ತಿವೆ. ಆರ್ಥಿಕವಾಗಿ ಬಡವರಿಗಂತೂ ಆಸ್ಪತ್ರೆ ಸೇವೆ ಎಂಬುದು ದೂರವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೆಂಗಳೂರಿನಲ್ಲಿ ಬಡವರು ಫುಟ್‌ಪಾತ್ ಮೇಲೆ ವ್ಯಾಪಾರ ಮಾಡುವವರನ್ನು ತೆರವುಗೊಳಿಸಿದ್ದಾರೆ. ಇದಕ್ಕೆ ಜೆಸಿಬಿ ಯಂತ್ರಗಳನ್ನು ಬಳಸಲಾಗಿದೆ. ಇದು ಅನ್ಯಾಯ ಅಲ್ಲದೆ ಆರ್ಥಿಕವಾಗಿ 4 ಸಾವಿರ ಕೋಟಿ ಹಣ ನಷ್ಟವಾಗಿದೆ. ಫುಟ್‌ಪಾತ್ ತೆರವು ಎಂಬುದು ನಗರಾಭಿವೃದ್ಧಿ ಸಚಿವರಾದ ಕೃಷ್ಣಬೈರೇಗೌಡ ಮಂತ್ರಿಗಳಿಗೆ ಇದು ತಮಾಷೆಯಾಗಿದೆ ಎಂದು ಕಿಡಿಕಾರಿದರು. ಈ ಹಿಂದೆ ಕ್ರಿಕೆಟ್ ಸಂಭ್ರಮಾಚರಣೆಯ ವೇಳೆ ನಡೆದ ಕಾಲ್ತುಳಿತದಲ್ಲಿ 11 ಮಂದಿ ಸಾವನ್ನಪ್ಪಿದ್ದರು. ಆಗ ಉಪಮುಖ್ಯಮಂತ್ರಿಗಳಾಗಿದ್ದ ಡಿ.ಕೆ.ಶಿವಕುಮಾರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕಿತ್ತು ಎಂದರು.

### ಬಿಡದಿಯಲ್ಲಿ ಸರ್ಕಾರದಿಂದಲೇ ರೈತರ ಇಬ್ಭಾಗ!

ಬಿಡದಿ ಹೋಬಳಿಯಲ್ಲಿ ಸಮಗ್ರ ಉಪನಗರ ಯೋಜನೆಯ ಭೂಸ್ವಾಧೀನದ ವಿಚಾರದಲ್ಲಿ ರೈತರನ್ನು ಸರ್ಕಾರವೇ ಇಬ್ಭಾಗ ಮಾಡಿದೆ. ಬಿಡದಿ ರೈತರಿಗೆ ನಮ್ಮ ಸಂಪೂರ್ಣ ಬೆಂಬಲ ಇದೆ. ಮುಂದಿನ ದಿನಗಳ ರೈತರು, ಮಹದಾಯಿ, ಮೇಕೆದಾಟು ವಿಚಾರದಲ್ಲಿ ಕನ್ನಡ ವಾಟಾಳ್ ಪಕ್ಷವು ಇಡೀ ಕರ್ನಾಟಕ ಬಂದ್‌ಗೆ ಕರೆ ನೀಡುತ್ತೇವೆ. ಮೇಕೆದಾಟು ವಿಷಯದಲ್ಲಿ ತಮಿಳುನಾಡು ಸರ್ಕಾರ ಅನ್ಯಾಯ ಮಾಡಿದ್ದಾರೆ. ಈ ಯೋಜನೆಗೆ ಹಣ ಎಷ್ಟು ಮೀಸಲಿಟ್ಟಿದ್ದಾರೆ ಎಂಬುದನ್ನು ರಾಜ್ಯದ ಜನತೆಗೆ ಸರ್ಕಾರವು ಬಹಿರಂಗಪಡಿಸಬೇಕು.

### ಜೋಸೆಫ್ ವಿಜಯ್ ಚಿತ್ರ ಬಿಡುಗಡೆಗೆ ಅಡ್ಡಿ

ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣ ವಿಚಾರದಲ್ಲಿ ಅನ್ಯಾಯ ಮಾಡುತ್ತಿರುವ ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರ ನಟನೆಯ ತಮಿಳುಚಿತ್ರ ಜು.23 ರಂದು ಬೆಂಗಳೂರಿನಲ್ಲಿ ಬಿಡುಗಡೆಯಾಗುತ್ತಿದೆ. ಅಂದು ತಾವು ತೀವ್ರ ಪ್ರತಿಭಟನೆ ಮಾಡುವುದಾಗಿ ತಿಳಿಸಿದರು. ಆ ದಿನವೂ ಕೂಡ ರಾಜ್ಯ ಮತ್ತು ಕೇಂದ್ರ ಸರ್ಕಾರದ ವೈಫಲ್ಯಗಳನ್ನು ಖಂಡಿಸಿ ಈಡುಗಾಯಿ ಹೊಡೆಯುವುದಾಗಿ ತಿಳಿಸಿದರು. ಪ್ರತಿಭಟನೆಯಲ್ಲಿ ಕರುನಾಡುಸೇನೆ ರಾಜ್ಯ ಉಪಾ ಧ್ಯಕ್ಷ ಎಂ. ಜಗದೀಶ್ ಐಜೂರು, ರಾಜ್ಯ ಉಸ್ತುವಾರಿ ಅಧ್ಯಕ್ಷ ಗಂಗಾಧರ್ ವಿ.ಎನ್, ಜಿಲ್ಲಾಧ್ಯಕ್ಷ ಸಿ.ಎಸ್.ಜಯಕುಮಾರ್, ಜಿಲ್ಲಾ ಮಹಿಳಾ ಘಟಕ ಅಧ್ಯಕ್ಷೆ ಲಕ್ಷ್ಮಿ, ತಾಲೂಕು ಅಧ್ಯಕ್ಷೆ ಪುಷ್ಪಲತಾ, ತಾಲೂಕು ಕಾರ್ಯ ದರ್ಶಿ ವೆಂಕಟಲಕ್ಷ್ಮಿ, ಜಿಲ್ಲಾ ದಲಿತ ಘಟಕದ ಅಧ್ಯಕ್ಷ ಕೆ. ಜಯರಾಮು, ಜಿಲ್ಲಾ ಯುವ ಘಟಕ ಅಧ್ಯಕ್ಷ ಶ್ರೀನಿವಾಸ್ ವಿ.ಎನ್, ತಾಲೂಕು ಗೌರವಾಧ್ಯಕ್ಷ ಕೆಂಪರಾಜು, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಕುಮಾರ್, ಕರುನಾಡುಸೇನೆ ತಾಲೂಕು ಕಾರ್ಯಾಧ್ಯಕ್ಷ ಪಿ.ಸುರೇಶ್ ಕೊತ್ತಿಪುರ, ವಾಟಾಳ್ ಪಕ್ಷದ ಬೆಂಗಳೂರು ಘಟಕದ ಅಧ್ಯಕ್ಷ ನಾರಾಯಣ ಸ್ವಾಮಿ, ವಾಟಾಳ್ ನಾಗರಾಜ್ ರವರ ಆಪ್ತ ಕಾರ್ಯದರ್ಶಿ ಪಾರ್ಥಸಾರಥಿ ಭಾಗವಹಿಸಿದ್ದರು.

ಆರ್.ಪಿ.ನಂಜುಂಡಸ್ವಾಮಿ ಹೇಳಿಕೆ | ಜಯ ಕರ್ನಾಟಕ ಜನಪರ ವೇದಿಕೆಯ ತಾಲೂಕು ಪದಾಧಿಕಾರಿಗಳ ನೇಮಕ

# ಸಕ್ರಿಯ ಸಂಘಟನೆಗಳಿಂದ ಸಮಾಜದ ಬದಲಾವಣೆ ಸಾಧ್ಯ

ಚಾಮರಾಜನಗರ, ಯುವಕರು ಸಕ್ರಿಯಯವಾಗಿ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಸಮಾಜದಲ್ಲಿ ಬದಲಾವಣೆ ಸಾಧ್ಯವಾಗುತ್ತದೆ ಎಂದು ಜಯ ಕರ್ನಾಟಕ ಜನಪರ ವೇದಿಕೆ ಜಿಲ್ಲಾ ಕಾರ್ಯಾಧ್ಯಕ್ಷ ಆರ್.ಪಿ.ನಂಜುಂಡಸ್ವಾಮಿ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ಜಯ ಕರ್ನಾಟಕ ಜನಪರ ವೇದಿಕೆ ಜಿಲ್ಲಾ ಘಟಕದ ವತಿಯಿಂದ ಭಾನುವಾರ ಆಯೋಜಿಸಿದ್ದ ಜಿಲ್ಲಾ ಮತ್ತು ತಾಲೂಕು ಮಟ್ಟದ ಪದಾಧಿಕಾರಿಗಳ ಆಯ್ಕೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರಸ್ತುತ ಸಂದರ್ಭದಲ್ಲಿ ನಮ್ಮನ್ನು ಆಳುವ ಸರ್ಕಾರಗಳು ಮತದಾರರನ್ನು ಅವ್ಯವಸ್ಥೆಯ ಕಡೆಗೆ ಕೊಂಡೊಯ್ಯುತ್ತಿದೆ. ಹಿರಿಯ ರಾಜಕಾರಣಿಗಳು ಯುವಜನಾಂಗವನ್ನು ರಾಜಕಾರಣಕ್ಕೆ ತರುವ ಕೆಲಸವನ್ನು ಮಾಡುತ್ತಿಲ್ಲ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ನಡೆಯದೇ ಇರುವುದು ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ. ರಾಜಕಾರಣಗಳನ್ನು ಎಚ್ಚರಿಸುವ ನಿಟ್ಟಿನಲ್ಲಿ ಸಂಘಟನೆಗಳ ಜವಾಬ್ದಾರಿ ಹೆಚ್ಚಾಗಿದೆ ಎಂದು ತಿಳಿಸಿದರು.

ರಾಜಕಾರಣ ಮತ್ತು ಸಂಘಟನಾತ್ಮಕವಾಗಿ ಸಾಕಷ್ಟು ವರ್ಷಗಳ ಕಾಲ ಕೆಲಸ ಮಾಡಿದ ಅನುಭವ ನನ್ನನ್ನು ಮತ್ತೆ ಸಂಘಟನೆ ಕಡೆ ಮುಖ ಮಾಡುವಂತೆ ಮಾಡಿದೆ. ಸಂಘಟನೆಯ ಕೆಲಸ ವಿಭಿನ್ನವಾಗಿ ಇರಬೇಕು ಎಂಬ ದೃಷ್ಟಿಯೊಂದಿಗೆ ಜಯ ಕರ್ನಾಟಕ ಜನಪರ ವೇದಿಕೆ ಸಂಸ್ಥಾಪಕ ಅಧ್ಯಕ್ಷರಾದ ಗುಣರಂಜನ್ ಶೆಟ್ಟಿ ಅವರ ಮಾರ್ಗದರ್ಶನದಲ್ಲಿ ಜಿಲ್ಲೆಯಲ್ಲಿ ಸಂಘನೆಯನ್ನು ಬಲಪಡಿಸಬೇಕಿದೆ ಎಂದರು. ಸಾಂಕೇತಿಕವಾಗಿ ಗುಂಡ್ಲುಪೇಟೆ ಮತ್ತು ಚಾಮರಾಜನಗರ ತಾಲೂಕು ಸಮಿತಿಯನ್ನು ಆಯ್ಕೆ ಮಾಡಲಾಗಿದೆ. ಎರಡು ವರ್ಷಗಳಿಗೆ ಒಮ್ಮೆ ತಾಲೂಕು ಅಧ್ಯಕ್ಷರನ್ನು ಆಯ್ಕೆ ಮಾಡುವಂತಹ ಕೆಲಸ ಮಾಡೋಣ. ಸಕ್ರಿಯವಾಗಿ ಯುವಕರು ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.



ಜಯ ಕರ್ನಾಟಕ ಜನಪರ ವೇದಿಕೆ ಜಿಲ್ಲಾಧ್ಯಕ್ಷ ಜಕಾವುಲ್ಲಾ ಮಾತನಾಡಿ, ಕೆಲವು ರಾಜಕೀಯ ಪಕ್ಷಗಳಲ್ಲಿ ಸಕ್ರಿಯವಾಗಿ ಕೆಲಸ ಮಾಡಿದ್ದೇನೆ. ಆದರೆ ಅವುಗಳಿಂದ ಅನುಕೂಲಗಳಿಗಿಂತಲೂ ಮೋಸ ಹೆಚ್ಚಾಗಿದೆ. ಈ ಕಾರಣಕ್ಕೆ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದೇನೆ. ನಮ್ಮ ಸಂಘಟನೆಯಲ್ಲಿ ರಾಜ್ಯಾದ್ಯಂತ 3-4ಲಕ್ಷ ಕಾರ್ಯಕರ್ತರು ಇದ್ದಾರೆ. ಯುವಕರು ಹೆಚ್ಚಿನ ಸಹಕಾರ ನೀಡಿದರೇ, ಸಂಘಟನೆ ಬಲಪಡಿಸಲು ನೆರವಾಗಲಿದೆ ಎಂದರು. ನಮ್ಮ ಸಂಘಟನೆಯ ಮೂಲಕ ಕರ್ನಾಟಕದ ನೆಲ, ಜಲ ಭಾಷೆ ಹಾಗೂ ಬಡವರ ಪರವಾಗಿ ನಿರಂತರವಾಗಿ ಹೋರಾಟ ಮಾಡುತ್ತೇವೆ. ರಾಜಕಾರಣಿಗಳು ಸೂಕ್ತ ರೀತಿಯಲ್ಲಿ ಕೆಲಸ ಮಾಡಿದ್ದೇ ಆದರೆ ಸಂಘಟನೆಗಳ ಅವಶ್ಯಕತೆ ಇರಲಿಲ್ಲ. ರಾಜಕೀಯ ಪಕ್ಷಗಳಿಗಿಂತಲೂ ಇಂದಿಗೂ ವಿವಿಧ ಸಂಘಟನೆಗಳು ರಾಜ್ಯದ ಉಳಿವಿಗೆ ಶ್ರಮಿಸುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ವೇದಿಕೆಯ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ್, ಚಂದ್ರಶೇಖರ್, ಮಾಂಬಳ್ಳಿ ರಾಜೇಶ್, ನಾಗಸ್ವಾಮಿ, ಜ್ಯೋತಿಗೌಡನಪುರ ನಾಗರಾಜು, ರೇಖಾ, ಭೀಮನಬೀಡು ನಾಗರಾಜು, ಮೊಹಮ್ಮದ್ ಕಿಜರ್, ದೇವರಾಜ್, ಚಂದ್ರಬಾಬು ಇದ್ದರು.

### ಪದಾಧಿಕಾರಿಗಳ ಆಯ್ಕೆ

ಜಯ ಕರ್ನಾಟಕ ಜನಪರ ವೇದಿಕೆಯ ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲೂಕು ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು. ಚಾಮರಾಜನಗರ ತಾಲೂಕು ಅಧ್ಯಕ್ಷರಾಗಿ ರಘು, ಪ್ರಧಾನ ಕಾರ್ಯದರ್ಶಿ ನಂಜುಂಡಸ್ವಾಮಿ, ಕಾರ್ಯಾಧ್ಯಕ್ಷ ಭರತ್, ಕಾರ್ಯದರ್ಶಿಯಾಗಿ ಸಿದ್ದರಾಜು, ಸಹ ಕಾರ್ಯದರ್ಶಿಯಾಗಿ ನಾಗರಾಜು ಅವರನ್ನು ನೇಮಕ ಮಾಡಲಾಯಿತು. ಗುಂಡ್ಲುಪೇಟೆ ತಾಲೂಕು ಅಧ್ಯಕ್ಷರಾಗಿ ನಾಗಸ್ವಾಮಿ, ಕಾರ್ಯಾಧ್ಯಕ್ಷರಾಗಿ ನಾಗಮಲ್ಲು ಅವರನ್ನು ನೇಮಕ ಮಾಡಲಾಯಿತು.

# ಶಿವದ್ಯಾವೇಗೌಡರಿಗೆ ಗೌರವ ಡಾಕ್ಟರೇಟ್

ರಾಮನಗರ: ನಗರದ ನಿವಾಸಿ ಎಂ.ಎ., ಬಿ.ಇಡಿ ಪದವೀಧರ ಜಿ.ಕೆ.ಶವದ್ಯಾವೇಗೌಡ ಅವರ ಸಮಾಜ ಸೇವೆಯನ್ನು ಗುರುತಿಸಿ ಯುನೈಟೆಡ್ ಅಮೇರಿಕನ್ ಯೂನಿವರ್ಸಿಟಿ ಫಾರ್ ಲೀಡರ್‌ಶಿಪ್ ಆಂಡ್ ಎಕ್ಸಲೆನ್ಸ್ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.



ಶಿವದ್ಯಾವೇಗೌಡ ಅವರ ಸಮಾಜ ಸೇವೆಯನ್ನು ಗುರುತಿಸಿ ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಲಾಗಿದೆ ಎಂದು ವಿವಿ ತಿಳಿಸಿದೆ.

ಬೆಂಗಳೂರಿನ ಕಬ್ಬನ್ ಉದ್ಯಾವನದಲ್ಲಿರುವ ಎನ್.ಜಿ.ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಒಕ್ಕಲಿಗರ ಹಿತರಕ್ಷಣಾ ಪರಿಷತ್ ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಪ್ರಶಸ್ತಿ ಪುರಸ್ಕೃತವಾಗಿರುವ ಯುವಜನ ಕೇಂದ್ರದ ಅಂಗ ಸಂಸ್ಥೆಯಾದ ಯುವ ಚೇತನ ಜಂಟಿಯಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಿವದ್ಯಾವೇಗೌಡ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗಿದೆ. ಮೂಲತಃ ಕನಕಪುರ ತಾಲ್ಲೂಕಿನವರಾದ ಇವರು ಸರೋಜಮ್ಮ ಮತ್ತು ಕೆಂಪೇಗೌಡರ ಪುತ್ರರಾಗಿದ್ದು, ರಾಮನಗರದಲ್ಲಿ ವಾಸಿಸುತ್ತಿದ್ದಾರೆ.

## ನಾಳೆಯಿಂದ ದೇಶಭಕ್ತಿಗೀತೆ



**ಮೈಸೂರು:** ಅಖಿಲ ಭಾರತೀಯ ಸಾಹಿತ್ಯ ಪರಿಷದ್ ವತಿಯಿಂದ ಆ. 22 ಮತ್ತು 23 ರಂದು ಬಹು ಭಾಷಾ ದೇಶಭಕ್ತಿ ಗೀತೆ ಗಾಯನ ಸ್ಪರ್ಧೆಯನ್ನು ನಗರದ ವಿಜಯ ವಿಠಲ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಸಮಿತಿ ಪದಾಧಿಕಾರಿ ಡಾ.ವಿ. ರಂಗನಾಥ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನೋಂದಾಯಿಸಿಕೊಳ್ಳಲು ಆ. 18 ಕೊನೆ ದಿನಲ ಒಂದೇ ವೇದಿಕೆಯಲ್ಲಿ ದೇಶದ ವಿವಿಧ ಭಾಷೆಗಳ ದೇಶಭಕ್ತಿ ಗೀತೆ ಕೇಳುವ ಅವಕಾಶ ಇದಾಗಿದೆ. ಹೀಗಾಗಿ ಸ್ಪರ್ಧಿಗಳು ಮಾತ್ರವಲ್ಲದೆ ಸಾರ್ವಜನಿಕರೂ ಆಗಮಿಸಬಹುದಾಗಿದೆ. ಇಲ್ಲಿ ಏಕವ್ಯಕ್ತಿ ಹಾಗೂ ಸಮೂಹ ಗೀತೆ ಹಾಡಬಹುದಾಗಿದೆ. ಕನ್ನಡ ಹಾಗೂ ಹಿಂದಿ ಭಾಷೆ ಹೊರತು ಪಡಿಸಿದ ಇತರೆ ಭಾಷೆಗಳ ಗೀತೆಗಳಾದಲ್ಲಿ ಅದರ ಭಾವಾರ್ಥವನ್ನು ಕನ್ನಡ ಅಥವಾ ಹಿಂದಿ ಭಾಷೆಯಲ್ಲಿ ಒಂದು ನಿಮಿಷ ತಿಳಿಸಬೇಕು. ವೈಯಕ್ತಿಕ ಹಾಡುಗಾರಿಕೆಗೆ 250 ರೂ., ಸಮೂಹ ಗೀತೆಗೆ 350 ರೂ. ಪ್ರವೇಶ ಶುಲ್ಕವಿದೆ. 10 ರಿಂದ 59 ವರ್ಷದವರಿಗೆ ವಿವಿಧ ವಿಭಾಗ ಹಾಗೂ 60 ವರ್ಷ ಮೀರಿದ ಹಿರಿಯ ನಾಗರಿಕರಿಗೂ ಒಂದು ವಿಭಾಗದಲ್ಲಿ ಹಾಡಲು ಅವಕಾಶವಿದೆ. ಆ. 22 ರಂದು ಮಧ್ಯಾಹ್ನ 2 ರಿಂದ ಹಾಗೂ 23 ರಂದು ಬೆಳಗ್ಗೆ 10.30 ರಿಂದ ಸ್ಪರ್ಧೆಗಳು ಪ್ರಾರಂಭವಾಗಲಿವೆ. ಹೆಚ್ಚಿನ ಮಾಹಿತಿಗೆ ದೂ. 94482 53359 ನ್ನು ಸಂಪರ್ಕಿಸಬಹುದಾಗಿದೆ ಎಂದರು. ಗಾಯತ್ರಿ ಸುಂದರೇಶ್, ಎಚ್.ಡಿ. ರಮೇಶ್, ರೂಪಶ್ರೀ ನಾಗರಾಜ್ ಹಾಗೂ ಎಸ್. ಸುಬ್ರಹ್ಮಣ್ಯ ಮತ್ತು ಮತ್ತೋರ್ವ ಎಸ್. ಸುಬ್ರಹ್ಮಣ್ಯ ಇದ್ದರು.

## ನೀಟ್‌ನಲ್ಲಿ ಲರ್ನಸ್ಟ್ ಅಕಾಡೆಮಿಯ ಸಾಧನೆ

ಮೈಸೂರು: ಸಾತಗಳ್ಳಿಯಲ್ಲಿರುವ ಲರ್ನರ್ಸ್ ನೀಟ್ ಅಕಾಡೆಮಿ ಈ ಬಾರಿಯ ನೀಟ್ ಫಲಿತಾಂಶದಲ್ಲಿ ಅತಿ ದೊಡ್ಡ ಸಾಧನೆ ಮಾಡಿದೆ. ಈ ಅಕಾಡೆಮಿಯಲ್ಲಿ ತರಬೇತಿ ಪಡೆದ ಗ್ರಾಮೀಣ ಹಾಗೂ ಬಡ ಮಕ್ಕಳಲ್ಲಿ 37 ಮಂದಿ ಪರೀಕ್ಷೆಗೆ ಕುಳಿತಿದ್ದು, ಇವರಲ್ಲಿ 30 ಮಂದಿ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದಿದ್ದಾರೆ. ಇದು ಶೇ. 81 ರಷ್ಟು ಸಾಧನೆಯಾಗಿದ್ದು, ರಾಷ್ಟ್ರದ ಇತರೆ ತರಬೇತಿ ಕೇಂದ್ರಗಳಿಗೆ ಹೋಲಿಸಿದರೆ ಅತಿ ದೊಡ್ಡ ಸಾಧನೆಯಾಗಿದೆ ಎಂದು ಸಂಸ್ಥಾಪಕ ಹಾಗೂ ನಿರ್ದೇಶಕ ಮುರಳಿ ಮೋಹನ್ ಕೋನರೆಡ್ಡಿ ತಿಳಿಸಿದರು.




ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ತಮ್ಮ ಅಕಾಡೆಮಿಯಲ್ಲಿ ಸಂಪೂರ್ಣವಾಗಿ ಉಚಿತ ತರಬೇತಿ ನೀಡಲಾಗುತ್ತಿದೆ. ಈಗ ಸಾಧನೆ ಮಾಡಿರುವವರು ರಾಜ್ಯದ ವಿವಿಧೆಡೆಯಿಂದ ಆಗಮಿಸಿರುವ ಹಾಗೂ ಮೈಸೂರು ನಗರದಲ್ಲಿನ ಬಡ ವಿದ್ಯಾರ್ಥಿಗಳೇ ಆಗಿದ್ದಾರೆ. ಇದೊಂದು ವಸತಿ ಸಹಿತದ ತರಬೇತಿಯಾಗಿದ್ದು, ಕೇವಲ ಊಟ, ವಸತಿ ವೆಚ್ಚ ಮಾತ್ರ ಭರಿಸಬೇಕಾಗುತ್ತದೆ. ಹೆಚ್ಚಿನ ಮಾಹಿತಿಗೆ ದೂ. 99163 97939 ನ್ನು ಸಂಪರ್ಕಿಸಬಹುದಾಗಿದೆ ಎಂದರು.

ಹಿರಿಯ ಪ್ರಾಧ್ಯಾಪಕ ಪ್ರೊ.ಎಚ್.ಸಿ. ನಾಗರಾಜು ಮಾತನಾಡಿ, ಈ ಸಾಧಕ ವಿದ್ಯಾರ್ಥಿಗಳನ್ನು ಪುರಸ್ಕರಿಸುವ ಕಾರ್ಯಕ್ರಮ ಜು. 22 ರ ಬೆಳಗ್ಗೆ 10ಕ್ಕೆ ಸಾತಗಳ್ಳಿಯಲ್ಲಿನ ಲರ್ನರ್ಸ್ ಗ್ಲೋಬಲ್ ಪಿಯು ಕಾಲೇಜು ಆವರಣದಲ್ಲಿ ನಡೆಯಲಿದೆ. ಈ ವೇಳೆ ಪೋಷಕರು, ಹಳೆಯ ವಿದ್ಯಾರ್ಥಿಗಳು ಹಾಗೂ ಇನ್ನಿತರರು ಸಹಾ ಇದ್ದು, ತರಬೇತಿಯ ಬಗ್ಗೆ ಅರಿವು ಮೂಡಿಸಿಕೊಳ್ಳಬಹುದಾಗಿದೆ. ತಮ್ಮ ಸಂಸ್ಥೆ ಪ್ರಚಾರಕ್ಕಾಗಿ ಈ ಕಾರ್ಯಕ್ರಮ ಆಯೋಜಿಸಿಲ್ಲ. ಬದಲಾಗಿ ಉತ್ತಮ ಸಾಧನೆ ಮಾಡುತ್ತಿರುವ ತಮ್ಮ ಸಂಸ್ಥೆಯಲ್ಲಿ ಪರಿಣಾಮಕಾರಿ ತರಬೇತಿಯನ್ನು ಉಚಿತವಾಗಿ ಪಡೆದುಕೊಳ್ಳುವ ಬಗ್ಗೆ ಅರಿವು ಮೂಡಿಸಲೆಂದು ಆಯೋಜಿಸಲಾಗಿದೆ. ವೈದ್ಯಕೀಯ ಶಿಕ್ಷಣಕ್ಕೆ ಕಡಿಮೆ ಖರ್ಚಿನಲ್ಲಿ ಪ್ರವೇಶ ಪಡೆಯಬಯಸುವ ಗ್ರಾಮೀಣ ಹಾಗೂ ಬಡ ಮಕ್ಕಳು ಪ್ರಯೋಜನ ಪಡೆಯುವಂತೆ ಕೋರಿದರು.

## ಜೆಎಸ್‌ಎಸ್: ರಾಷ್ಟ್ರೀಯ ಕಾರ್ಯಾಗಾರ

ಮೈಸೂರು: ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್, ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿ ಔಷಧಶಾಸ್ತ್ರ ವಿಭಾಗದ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ರೆಗ್ಯುಲೇಟರಿ ಸೈನ್ಸಸ್ ವತಿಯಿಂದ ಸ್ಪಾರ್ಕಲ್ ಸಿನೆ ಸಹಯೋಗದಲ್ಲಿ ಹಾಗೂ ಅಮೆರಿಕದ ಆಹಾರ ಮತ್ತು ಔಷಧ ಆಡಳಿತ ಇಂಡಿಯಾ ಕಚೇರಿ ಸಹಭಾಗಿತ್ವದಲ್ಲಿ "ತರಗತಿಯಿಂದ ಅನುಸರಣೆವರೆಗೆ: ಉತ್ತಮ ದಾಖಲಾತಿ ನಿರ್ವಹಣಾ ಪದ್ಧತಿಗಳ ಪ್ರಾವೀಣ್ಯತೆ" ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ನಡೆಸಲಾಯಿತು. ಕಾರ್ಯಾಗಾರದಲ್ಲಿ ಸುಮಾರು 150 ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಔಷಧ ಉದ್ಯಮದ ವೃತ್ತಿಪರರು ಭಾಗವಹಿಸಿ, ಜಾಗತಿಕ ನಿಯಂತ್ರಣ ವ್ಯವಸ್ಥೆಗಳು ಮತ್ತು ಗುಣಮಟ್ಟದ ದಾಖಲಾತಿ ನಿರ್ವಹಣೆಯ ಕುರಿತು ಅಮೂಲ್ಯವಾದ ಮಾಹಿತಿಯನ್ನು ಪಡೆದುಕೊಂಡರು. ಕಾರ್ಯಾಗಾರವನ್ನು ಜೆಎಸ್‌ಎಸ್ ಅಕಾಡೆಮಿಯ ಉಪಕುಲಪತಿ ಡಾ.ಬಿ.ಸುರೇಶ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅಕಾಡೆಮಿಯ ಕುಲಪತಿ ಡಾ.ಎಚ್.ಬಸವನಗೌಡಪ್ಪ, ನೋಂದಣಾಧಿಕಾರಿ ಡಾ.ಬಿ. ಮಂಜುನಾಥ, ಯುಎಸ್ ಎಫ್‌ಡಿಎ ಇಂಡಿಯಾ ಕಚೇರಿಯ ಹಿರಿಯ ತಾಂತ್ರಿಕ ಸಲಹೆಗಾರ ಧ್ರುವ್ ಶಾ ಹಾಗೂ ಅಂತರರಾಷ್ಟ್ರೀಯ ಸಂಬಂಧಗಳ ತಜ್ಞೆ ಡಾ. ಜಾಕ್ವಿನ್ ಜೋನ್ಸ್,ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿಯ ಪ್ರಾಂಶುಪಾಲ ಡಾ.ಟಿ.ಎಂ.ಪ್ರಮೋದ್ ಕುಮಾರ್ ಉಪಸ್ಥಿತರಿದ್ದರು.




## ವಿ.ಸೋಮಣ್ಣ ಹುಟ್ಟುಹಬ್ಬ ಆಚರಣೆ



ಚಾಮರಾಜನಗರ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಪತ್ನಿ ಚೆನ್ನಮ್ಮ ನಿಧನದ ಹಿನ್ನಲೆಯಲ್ಲಿ ಭಾರತ ಸರ್ಕಾರದ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರಾದ ವಿ.ಸೋಮಣ್ಣ ಅವರ ಹುಟ್ಟುಹಬ್ಬವನ್ನು ಅಭಿಮಾನಿಗಳು ನಗರದ ಮಾರಮ್ಮ ದೇವಸ್ಥಾನದಲ್ಲಿ ವಿಶೇಷಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಲಾಡು ವಿತರರಿಸುವ ಮೂಲಕ ಸರಳವಾಗಿ ಆಚರಣೆ ಮಾಡಿದರು.

ಅಭಿಮಾನಿಗಳಾದ ತಾ.ಪಂ.ಮಾಜಿ ಉಪಾಧ್ಯಕ್ಷ ದಯಾನಿಧಿ, ಎಪಿಎಂಸಿ ನಿರ್ದೇಶಕ ವೆಂಕಟರಾವ್. ಸಾಠೆ, ಮುಖಂಡರಾದ ನಟರಾಜು, ಕೆ.ವೀರಭದ್ರಸ್ವಾಮಿ, ಸೋಮವಾರಪೇಟೆ ವಿಶ್ವ, ಗ್ರಾ.ಪಂ.ಮಾಜಿ ಉಪಾಧ್ಯಕ್ಷ ಮಹೇಶ್ ಉತ್ತುವಳ್ಳಿ ಇತರರು ನಗರದ ಮಾರಮ್ಮ ದೇವಸ್ಥಾನದಲ್ಲಿ ವಿ.ಸೋಮಣ್ಣ ಅವರ ಹೆಸರಿನಲ್ಲಿ ಅರ್ಚನೆ ಮಾಡಿಸಿ, ದೇವರಿಗೆ ವಿಶೇಷಪೂಜೆ ಸಲ್ಲಿಸಿ, ಲಾಡು ವಿತರಿಸಿದರು. ಈ ಸಂದರ್ಭದಲ್ಲಿ ಮುಖಂಡ ನಟರಾಜು ಮಾತನಾಡಿ, ಭಾರತ ಸರ್ಕಾರದ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರಾದ ವಿ.ಸೋಮಣ್ಣ ಅವರ ಹುಟ್ಟುಹಬ್ಬವನ್ನು ಅಭಿಮಾನಿಗಳು ನಗರದಲ್ಲಿ ಅದ್ದೂರಿ ಆಚರಣೆಗೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಪತ್ನಿ ಚೆನ್ನಮ್ಮ ನಿಧನದ ಹಿನ್ನಲೆಯಲ್ಲಿ ವಿ. ಸೋಮಣ್ಣ ಅವರ ಹುಟ್ಟುಹಬ್ಬವನ್ನು ಅಭಿಮಾನಿಗಳಾದ ನಾವು ಭಾರತ ಸರ್ಕಾರದ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರಾದ ವಿ. ಸೋಮಣ್ಣ ಅವರ ಹುಟ್ಟುಹಬ್ಬವನ್ನು ಅಭಿಮಾನಿಗಳು ನಗರದ ಮಾರಮ್ಮ ದೇವಸ್ಥಾನದಲ್ಲಿ ವಿಶೇಷಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಲಾಡು ವಿತರರಿಸುವ ಮೂಲಕ ಸರಳವಾಗಿ ಆಚರಣೆ ಮಾಡಲಾಯಿತು.

## ಪ್ರತಿ ಗ್ರಾಮದಲ್ಲೂ ಬಿಎಸ್‌ಐ ಶಾಖೆ ಸ್ಥಾಪಿಸಿ




ಚಾಮರಾಜನಗರ, ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು ಸ್ಥಾಪಿಸಿದ ಭಾರತೀಯ ಬೌದ್ಧ ಮಹಾಸಭಾದ ಶಾಖೆಯನ್ನು ಪ್ರತಿ ಗ್ರಾಮದಲ್ಲಿ ಸ್ಥಾಪಿಸಬೇಕು ಎಂದು ಬೌದ್ಧ ಮಹಾಸಭಾ ರಾಷ್ಟ್ರೀಯ ಸಂಘಟಕ ಮಲ್ಲಿಕಾರ್ಜುನ ಭಾಲ್ಕಿ ಹೇಳಿದರು.

ನಗರದ ಸಾರನಾಥ ಬೌದ್ಧವಿಹಾರದಲ್ಲಿ ಭಾರತೀಯ ಬೌದ್ಧ ಮಹಾಸಭಾದ ಜಿಲ್ಲಾ ಶಾಖೆಯ ವತಿಯಿಂದ ನಡೆದ ಕಾರ್ಯಕರ್ತರ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಡಾ.ಬಿ.ಆರ್. ಅಂಬೇಡ್ಕರ್ ಅವರು 1954 ಮೇ 4 ರಂದು ಮುಂಬೈನಲ್ಲಿ ಭಾರತೀಯ ಬೌದ್ಧ ಮಹಾಸಭಾ ಸ್ಥಾಪಿಸಿ ಸ್ವತಹ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಭಾರತವನ್ನು ಪ್ರಬುದ್ಧ ನಿರ್ಮಾಣಕ್ಕಾಗಿ ಈ ಸಂಸ್ಥೆ ಸ್ಥಾಪಿಸಿದರು. ಇದು ದೇಶದ 24 ರಾಜ್ಯಗಳಲ್ಲಿ ಶಾಖೆಗಳಿದ್ದು, ಕರ್ನಾಟಕದ 18 ಜಿಲ್ಲೆಗಳಲ್ಲೂ ಬೌದ್ಧ ಮಹಾಸಭಾದ ಶಾಖೆಗಳಿದ್ದು, ಅಂಬೇಡ್ಕರ್ ಅವರ ಆಶಯ ಈಡೇರಿಸಬೇಕಾದರೆ ದೇಶದ ಪ್ರತಿಜಿಲ್ಲೆಯಲ್ಲಿ ಶಾಖೆಗಳು ಆಗಬೇಕಿದೆ ಎಂದರು.

ಕೇಂದ್ರ ಶಿಕ್ಷಕರಾದ ಮನೋಹರ್ ಮೌರ್ಯ, ವೈಶಾಲಿಮೌರ್ಯ ಬೌದ್ಧ ಮಹಾಸಭಾದ ನೀತಿ, ನಿಯಮಗಳ ಬಗ್ಗೆ ತಿಳಿಸಿಕೊಟ್ಟರು. ಬಿಎಸ್‌ಐ ಮಹಿಳಾ ಘಟಕ ರಾಜ್ಯಾಧ್ಯಕ್ಷೆ ಮಂಗಳದೊಡ್ಡಮನಿ, ಕೇಂದ್ರ ಶಿಕ್ಷಕಿ ಲತಾ, ಜಿಲ್ಲಾಧ್ಯಕ್ಷ ಆರ್.ಬಸವರಾಜು, ಜಿಲ್ಲಾ ಮಹಿಳಾ ಅಧ್ಯಕ್ಷೆ ನಾಗಶಿಲ್ಪ, ಉಪಾಧ್ಯಕ್ಷ ರಾದ ಉಮೇಶ್ ಕುದರ್, ವಕೀಲರಾದ ಮಲ್ಲಿಕ್ ಯಲಕ್ಕೂರು, ತಾಲೂಕು ಅಧ್ಯಕ್ಷ ಕೃಷ್ಣಯ್ಯ, ಪ್ರಧಾನ ಕಾರ್ಯದರ್ಶಿ ನಂಜುಂಡಯ್ಯ, ಖಜಾಂಚಿ ಡಿ.ಸೋಮಣ್ಣ ಹಾಜರಿದ್ದರು.

### ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್

# ಮೈಸೂರು: ಮಹಿಳಾ ತಂಡ ಪ್ರಕಟ

## ಶುಭಾ ಸತೀಶ್‌ಗೆ ವಾರಿಯರ್ಸ್ ನಾಯಕತ್ವದ ಹೊಣೆ | ಟ್ರೋಫಿ ಗೆಲ್ಲುವ ವಿಶ್ವಾಸದಲ್ಲಿ ತಂಡ

ಮೈಸೂರು: ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿಯ 2ನೇ ಆವೃತ್ತಿಗೆ ಮೈಸೂರು ವಾರಿಯರ್ಸ್ ಮಹಿಳಾ ತಂಡವನ್ನು ಅಧಿಕೃತವಾಗಿ ಪ್ರಕಟಿಸಲಾಗಿದೆ. ರಾಜ್ಯದ ಪ್ರತಿಭಾವಂತ ಆಟಗಾರ್ತಿ ಶುಭಾ ಸತೀಶ್ ಅವರಿಗೆ ನಾಯಕತ್ವದ ಹೊಣೆ ನೀಡಲಾಗಿದ್ದು, ಭಾರತ ತಂಡದ ಮಾಜಿ ಆಟಗಾರ್ತಿ ಕರುಣಾ ಜೈನ್ ಮುಖ್ಯ ತರಬೇತುದಾರರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಭಾರತದ ಪ್ರಮುಖ ಅಗರಬತ್ತಿ ತಯಾರಕ ಸಂಸ್ಥೆಯಾದ ಎನ್‌ಆರ್ ಗ್ರೂಪ್ ಒಡೆತನದ ಮೈಸೂರು ವಾರಿಯರ್ಸ್, ಚೊಚ್ಚಲ ಆವೃತ್ತಿಯಲ್ಲಿ ಗಮನಾರ್ಹ ಪ್ರದರ್ಶನ ನೀಡಿತ್ತು. ಈ ಬಾರಿ ಮತ್ತಷ್ಟು ಬಲಿಷ್ಠ ತಂಡದೊಂದಿಗೆ ಕಣಕ್ಕಿಳಿಯಲು ಸಜ್ಜಾಗಿದೆ.

**ವೇದಿಕೆ ಒದಗಿಸಿದ ರಂಗ ಕುಟುಂಬಕ್ಕೆ ಕೃತಜ್ಞತೆ**




### ಕಪ್ ಗೆಲ್ಲುವ ಗುರಿ: ನಾಯಕಿ ಶುಭಾ ಸತೀಶ್

ತಂಡದ ನಾಯಕಿ ಶುಭಾ ಸತೀಶ್ ಮಾತನಾಡಿ, "ಈ ಬಾರಿ ನಾವು ಸಂಪೂರ್ಣವಾಗಿ ಸಜ್ಜಾಗಿದ್ದು, ಕಪ್ ಗೆಲ್ಲುವ ನಿಟ್ಟಿನಲ್ಲಿ ಕಠಿಣ ತರಬೇತಿ ಪಡೆದಿದ್ದೇವೆ. ಪ್ರತಿಯೊಬ್ಬ ಆಟಗಾರ್ತಿಯೂ ಅತ್ಯುತ್ತಮ ಪ್ರದರ್ಶನ ನೀಡಲು ಬದ್ಧರಾಗಿದ್ದು, ನಿರ್ಭೀತ ಹಾಗೂ ಪಾಸಿಟಿವ್ ಕ್ರಿಕೆಟ್ ಆಡಲಿದ್ದೇವೆ. ಮೈಸೂರಿಗೆ ಟ್ರೋಫಿ ತರುವುದೇ ನಮ್ಮ ಏಕೈಕ ಗುರಿಯಾಗಿದೆ" ಎಂದು ಹುಮ್ಮಸ್ಸು ವ್ಯಕ್ತಪಡಿಸಿದರು.

ಮುಖ್ಯ ತರಬೇತುದಾರರಾದ ಕರುಣಾ ಜೈನ್ ಮಾತನಾಡಿ, "ತಂಡದಲ್ಲಿ ಅನು ಭವಿ ಹಾಗೂ ಯುವ ಆಟಗಾರ್ತಿಯರ ಉತ್ತಮ ಸಮತೋಲನವಿದೆ. ತರಬೇತಿ ಶಿಬಿರದಲ್ಲಿ ಎಲ್ಲರೂ ಕಠಿಣ ಶ್ರಮ ವಹಿಸಿದ್ದು, ಸರಣಿಯುದ್ದಕ್ಕೂ ಸ್ಥಿರ ಪ್ರದರ್ಶನ ನೀಡುವ ಭರವಸೆ ನಮಗಿದೆ" ಎಂದರು.

**ಸೂಚನೆ**
ಟೂರ್ನಿಯ ಪಂದ್ಯಗಳು ಜುಲೈ 22ರಿಂದ ಆಗಸ್ಟ್ 2ರ ವರೆಗೆ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಮೈಸೂರು, ಬೆಂಗಳೂರು, ಹುಬ್ಬಳ್ಳಿ ಮತ್ತು ಗುಲ್ಬರ್ಗಾ ಸೇರಿ ಒಟ್ಟು ನಾಲ್ಕು ತಂಡಗಳು ಕಣಕ್ಕಿಳಿಯಲಿವೆ.

ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಭಾರತದ ಮಹಿಳಾ ಅಂಧರ ಕ್ರಿಕೆಟ್ ತಂಡದ ವಿಶ್ವಕಪ್ ವಿಜೇತ ನಾಯಕಿ ಹಾಗೂ ರಂಗರಾವ್ ಸ್ಮಾರಕ ವಿಶೇಷಚೇತನರ ಶಾಲೆಯ (ಆರ್‌ಎಂಎಸ್ಡಿ) ಹಳೆಯ ವಿದ್ಯಾರ್ಥಿನಿ ಟಿ.ಸಿ. ದೀಪಿಕಾ ಮಾತನಾಡಿ, "ಮೈಸೂರು ವಾರಿಯರ್ಸ್‌ನಂತಹ ಫ್ರಾಂಚೈಸಿಗಳ ಬೆಂಬಲ ಮಹಿಳಾ ಕ್ರಿಕೆಟ್ನ ಬೆಳವಣಿಗೆಗೆ ಅತ್ಯಂತ ಅಮೂಲ್ಯ. ರಂಗರಾವ್ ಶಾಲೆಯ ಮೂಲಕ ನನಗೆ ಕ್ರಿಕೆಟ್ ಮುಂದುವರಿಸಲು ಅವಕಾಶ ಮಾಡಿಕೊಟ್ಟ ರಂಗ ಕುಟುಂಬಕ್ಕೆ ನಾನು ಆಭಾರಿಯಾಗಿದ್ದೇನೆ. ಆ ವೇದಿಕೆ ನೀಡಿದ ಆತ್ಮವಿಶ್ವಾಸದಿಂದಲೇ ನಾನಿಂದು ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಯಿತು" ಎಂದು ಸ್ಮರಿಸಿದರು.

### ವೃತ್ತಿಪರ ವೇದಿಕೆ ಕಲ್ಪಿಸುವುದೇ ನಮ್ಮ ಉದ್ದೇಶ

ತಂಡದ ಪ್ರಕಟಣೆ ವೇಳೆ ಮಾತನಾಡಿದ ಮೈಸೂರು ವಾರಿಯರ್ಸ್ ಮಾಲೀಕ ಹಾಗೂ ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ, "ನಮ್ಮ ಉದ್ದೇಶ ಕೇವಲ ಸ್ಪರ್ಧಿಸುವುದಷ್ಟೇ ಅಲ್ಲ, ಬದಲಾಗಿ ಪ್ರತಿಭಾವಂತ ಮಹಿಳಾ ಕ್ರಿಕೆಟಿಗರಿಗೆ ವೃತ್ತಿಪರ ವೇದಿಕೆಯಲ್ಲಿ ಮಿಂಚಲು ಅವಕಾಶಗಳನ್ನು ಸೃಷ್ಟಿಸುವುದಾಗಿದೆ. ಮೊದಲ ಸೀಸನ್ಗೆ ಸಿಕ್ಕ ಪ್ರತಿಕ್ರಿಯೆ ನಮಗೆ ಪ್ರೋತ್ಸಾಹ ನೀಡಿದ್ದು, ಈ ವರ್ಷದ ತಂಡವು ಮತ್ತಷ್ಟು ಯುವತಿಯರನ್ನು ಕ್ರಿಕೆಟ್ನತ್ತ ಆಕರ್ಷಿಸಲು ಪ್ರೇರಣೆಯಾಗಲಿದೆ ಎಂಬ ವಿಶ್ವಾಸವಿದೆ" ಎಂದು ಶುಭ ಹಾರೈಸಿದರು.

### ಸಿಎಸ್‌ಆರ್ ನಿಧಿಯಡಿ ನೆರವು ಪ್ರೋತ್ಸಾಹ

ಮೈಸೂರು ವಾರಿಯರ್ಸ್ ಫ್ರಾಂಚೈಸಿಯು ಮೈಸೂರಿನ ಕೆರಗಳ್ಳಿಯಲ್ಲಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯದ (ಕೆಜಿಬಿವಿ) ಒದಿಗಿನ ತನ್ನ ಪಾಲುದಾರಿಕೆಯನ್ನು ಮುಂದುವರಿಸಿದೆ. ವಿದ್ಯಾರ್ಥಿನಿಯರನ್ನು ಕ್ರೀಡೆ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಪ್ರೋತ್ಸಾಹಿಸುವ ಸಲುವಾಗಿ ಕ್ರಿಕೆಟ್ ಪರಿಕರಗಳು, ಕ್ರೀಡಾ ಸಮವಸ್ತ್ರ ಹಾಗೂ ಡ್ರಮ್ ಸೆಟ್ಗಳನ್ನು ವಿತರಿಸಲಾಯಿತು. ಇದರ ಜೊತೆಗೆ, ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯು ತನ್ನ ಸಾಮಾಜಿಕ ಕಳಕಳಿಯ ಭಾಗವಾಗಿ ಉಷಾ ಕಿರಣ್ ಕಣ್ಣಿನ ಆಸ್ಪತ್ರೆ ಮತ್ತು ಎಬಿಲಿಟಿ ಸ್ಪೋರ್ಟ್ಸ್ ಲೀಗ್ (ಎಎಸ್‌ಎಲ್) ಕ್ರಿಕೆಟ್ ಸಂಸ್ಥೆಗೆ ತಲಾ 1.5 ಲಕ್ಷ ರೂ.ಗಳಂತೆ ಒಟ್ಟು 3 ಲಕ್ಷ ರೂ.ಗಳ ಆರ್ಥಿಕ ನೆರವಿನ ಚೆಕ್ಗಳನ್ನು ಹಸ್ತಾಂತರಿಸಿತು.

### ಡಾ.ಕೃಪಾಶಂಕರ್ ಅಭಿಮತ | ನಾಗ ಮಾರ್ಷಲ್ ಆರ್ಟ್ಸ್ ಅಕಾಡೆಮಿಯಿಂದ ಕಲರ್ ಬೆಲ್ಟ್ ಪರೀಕ್ಷೆ

# ಕ್ರೀಡೆಯಿಂದ ಮಾನಸಿಕ, ದೈಹಿಕ ಆರೋಗ್ಯ ವೃದ್ಧಿ

ಚಾಮರಾಜನಗರ, ಕ್ರೀಡೆಯು ಮಕ್ಕಳ ದೈಹಿಕ, ಮಾನಸಿಕ ಆರೋಗ್ಯ ವೃದ್ಧಿ ಮಾಡುತ್ತದೆ ಎಂದು ದಂತ ವೈದ್ಯ ಡಾ. ಕೃಪಾ ಶಂಕರ್ ಹೇಳಿದರು.

ನಗರದ ಪಿಡಬ್ಲ್ಯೂಡಿ ಸರ್ಕಾರಿ ಶಾಲಾವರಣದಲ್ಲಿ ನಾಗ ಮಾರ್ಷಲ್ ಆರ್ಟ್ಸ್ ಅಕಾಡೆಮಿ ವತಿಯಿಂದ ನಡೆದ ಕಲರ್ ಬೆಲ್ಟ್ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಮತ್ತು ಬೆಲ್ಟ್ ವಿತರಿಸಿ ಮಾತನಾಡಿದರು. ಕಲುಷಿತ, ಕಲಬೆರಕೆ ಆಹಾರದಿಂದ ಇತ್ತೀಚಿನ ದಿನಗಳಲ್ಲಿ ಚಿಕ್ಕ ವಯಸ್ಸಿನಲ್ಲೇ ಮಕ್ಕಳ ಆರೋಗ್ಯ ಹಾಳಾಗುತ್ತಿದ್ದು, ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಇದರಿಂದ ಹೊರಬರಬೇಕಾದರೆ ಮಕ್ಕಳಿಗೆ ಕ್ರೀಡೆ ಅವಶ್ಯಕವಾಗಿದೆ ಎಂದರು.

ಕ್ರೀಡೆಯಿಂದ ಜೀವನದಲ್ಲಿ ಸದೃಢ ವ್ಯಕ್ತಿಗಳಾಗಿ ಬೆಳೆಯಬಹುದು. ಆಟೋಟಗಳಿಂದ ಉತ್ಸಾಹಿಯಾಗಿರಬಹುದು.ಜೀವನದಲ್ಲಿಯ ಉದ್ದೇಶ, ಗುರಿ ಈಡೇರಿಸಿಕೊಳ್ಳಲು ಆರೋಗ್ಯವಂತ ಮನಸ್ಸು ಮತ್ತು ಶರೀರದ ಅವಶ್ಯಕತೆ ಇದೆ.



ಆರೋಗ್ಯ ವೃದ್ಧಿಸಿಕೊಳ್ಳಲು ಕ್ರೀಡೆಗಳ ಪಾತ್ರ ಮಹತ್ವದ್ದಾಗಿದೆ. ಪ್ರತಿಯೊಬ್ಬರೂ ಒಳ್ಳೆಯ ಆರೋಗ್ಯ ಹೊಂದಬಹುದು ಎಂದು ಅಭಿಪ್ರಾಯಪಟ್ಟರು.

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಶಿಹಾನ್ ಸೋಸ್ಲೆ ಸಿದ್ದರಾಜು ಮಾತನಾಡಿ, ಆತ್ಮರಕ್ಷಣೆಗೆ ಕರಾಟೆ ಕಲೆಯು ಸಹಕಾರಿಯಾಗಿದೆ. ಕರಾಟೆಯು ಪ್ರಚಲಿತ ವಾಗುತ್ತಿದ್ದು, ಸರ್ಕಾರ ಕ್ರೀಡೆಗೆ ಸೇರಿಕೊಂಡಿದೆ. ಇದರಿಂದ ಉದ್ಯೋಗ ಸಿಗುವ ಭರವಸೆಯಿದೆ ಎಂದರು.

ಈ ಪರೀಕ್ಷೆಯಲ್ಲಿ ಜಿಲ್ಲೆಯ ಎಲ್ಲಾ ಭಾಗಗಳಿಂದ ನೂರಕ್ಕೂ ಹೆಚ್ಚು ಕರಾಟೆ ವಿದ್ಯಾರ್ಥಿಗಳು ಹಾಜರಾಗಿ ಪರೀಕ್ಷೆಯು ಯಶಸ್ವಿಯಾಗಿ ನಡೆದಿರುತ್ತದೆ.

ಕಾರ್ಯಕ್ರಮದಲ್ಲಿ ಪಿಡಬ್ಲ್ಯೂಡಿ. ಶಾಲೆಯ ಮುಖ್ಯೋಪಾಧ್ಯಾಯ ಮಹದೇವಯ್ಯ, ಯೋಗ ತರಬೇತುದಾರ ರಾಜಶೇಖರ ಮೂರ್ತಿ, ಅನ್ವರ್ ಖಾನ್ ಸಂಸ್ಥೆಯ ಮುಖ್ಯ ತರಬೇತಿದಾರ ವಕೀಲರಾದ ಸೆನ್ಸಾಯ್ ಎಂ. ರಾಜೇಂದ್ರ, ತರಬೇತುದಾರ ಸೆನ್ಸಾಯ್ ಯೋಗೇಶ್, ಸೆನ್ಸಾಯ್ ರಮೇಶ್, ಸೆಂಪಾಯ್ ಅಬ್ದುಲ್ ಫೈಸಲ್, ಶೇಖರ್, ವಿಜಯ್, ಅವಿನಾಶ್ ,ಲೋಕೇಶ್, ಸಿದ್ದರಾಜು ಮಹಾಂತೇಶ್ ಇನ್ನಿತರ ಹಾಜರಿದ್ದರು.

# ನೀಟ್ ಅಕ್ರಮ: ಸಚಿವರ ರಾಜೀನಾಮೆಗೆ ಆಗ್ರಹಿಸಿ ಉಪವಾಸ ಧರಣಿ

ಮೈಸೂರು: ದೇಶದಲ್ಲಿ ಸರಣಿಯಾಗಿ 5 ವರ್ಷಗಳ ಕಾಲ ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದು 2026ರಲ್ಲಿ ಅದರ ಸಮಸ್ಯೆ ತಾರಕಕ್ಕೇರಿ ದೇಶಾದ್ಯಂತ 20ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಘಟನೆಗೆ ಕಾರಣರಾದ ಕೇಂದ್ರ ಸಚಿವರ ರಾಜೀನಾಮೆಗೆ ಆಗ್ರಹಿಸಿ ಮೈಸೂರಿನಲ್ಲಿ ಎರಡು ಕಡೆಗಳಲ್ಲಿ ಒಂದು ದಿನದ ಸಾಂಕೇತಿಕ ಉಪವಾಸ ಧರಣಿ ನಡೆದವು.

ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘವು ಮೈಸೂರಿನ ಗಾಂಧಿ ಚೌಕದಲ್ಲಿ ದೇಶದಲ್ಲಿ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ಆತ್ಮಹತ್ಯೆ ಮಾಡಿಕೊಂಡ 21 ವಿದ್ಯಾರ್ಥಿಗಳ ಸಾವಿಗೆ ಹೊಣೆ ಯಾರು ? ಜನರಿಂದ ಆಯ್ಕೆಯಾದ ಸರ್ಕಾರ ಜನರಿಗೆ ಸ್ಪಂದಿಸದೆ ಸರ್ವಾಧಿಕಾರಿ ಧೋರಣೆ ತೋರಿಸುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ 24 ಗಂಟೆಗಳ ಕಾಲ ಉಪವಾಸ ಸತ್ಯಾಗ್ರಹ ನಡೆಸಿತು. ಸಾವನ್ನಪ್ಪಿದವರನ್ನು ಕೇವಲ ವಿದ್ಯಾರ್ಥಿಗಳು ಎಂದು ಭಾವಿಸದೆ ಅವರು ಭಾರತ ದೇಶದ ಭವಿಷ್ಯ ಎಂದು ಅರ್ಥ ಮಾಡಿಕೊಳ್ಳುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣವಾಗಿ ಸೋತಿದೆ. ಕೇಂದ್ರ ಸರ್ಕಾರ ಭಾರತ ದೇಶದ ಭವಿಷ್ಯವನ್ನು ತಮ್ಮ ಅಸಮರ್ಪಕ ಕಾರ್ಯ ವೈಖರಿಯಿಂದ ಹತ್ಯೆ ಮಾಡಿದ್ದಾರೆ ಎಂದು ಹೇಳಿದರು ತಪ್ಪಾಗಲಾರದು ಎಂದರು.







ಇಂಥ ಘೋರ ಅಪರಾಧವನ್ನು ಒಪ್ಪಿಕೊಳ್ಳದೆ ಈ ಘಟನೆಗೂ ನನಗೂ ಏನೂ ಸಂಬಂಧವಿಲ್ಲ ಎಂದು ಹೆಮ್ಮೆ ಚರ್ಮದಂತೆ ವರ್ತಿಸುತ್ತಿರುವ ಕೇಂದ್ರ ಸರ್ಕಾರದ ಧೋರಣೆಯನ್ನು ವಿರೋಧಿಸುತ್ತೇವೆ. ದೆಹಲಿಯಲ್ಲಿ ಕೇಂದ್ರ ಸರ್ಕಾರವನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ಹೊಣೆಗಾರಿಕೆಯನ್ನು ಹೊತ್ತು ರಾಜೀನಾಮೆ ನೀಡಬೇಕು. ಈ ವಿದ್ಯಾರ್ಥಿಗಳ ಆತ್ಮಹತ್ಯೆಗೆ ಯಾರು ಹೊಣೆ ಎಂದು ಪ್ರಶ್ನೆ ಮಾಡಿದ್ದಕ್ಕಾಗಿ ಸೋನಂ ವಾಂಗ್ ಚುಕ್ ಮತ್ತು ಹೋರಾಟ ನಿರತ ವಿದ್ಯಾರ್ಥಿಗಳನ್ನು ನಡೆಸಿಕೊಳ್ಳುತ್ತಿರುವ ರೀತಿ ಅಸಂವಿಧಾನಿಕ. ಕೇಂದ್ರ ಸರ್ಕಾರ ತನ್ನ ಧೋರಣೆಯನ್ನು ಬದಲಾಯಿಸಿಕೊಳ್ಳಬೇಕೆಂದು ಆಗ್ರಹಿಸಿದರು. ಹೋರಾಟದಲ್ಲಿ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಅಧ್ಯಕ್ಷೀಯ ಮಂಡಳಿ ಸದಸ್ಯರಾದ ಚುಕ್ಕಿ ನಂಜುಂಡಸ್ವಾಮಿ, ಪತ್ರಕರ್ತೆ ರಶ್ಮಿ ಕೋಟಿ, ಪ್ರಗತಿಪರ ಚಿಂತಕರಾದ ಸವಿತಾ ಪಾ ಮಲ್ಲೇಶ್, ಕವಿತಾ ಕುರುಗುಂಟಿ, ಸಂತೋಷ್ ಕೌಳಗಿ, ಕಾಳ ಚನ್ನೇಗೌಡ, ಜೈ ಬಿ ಮಂಜುನಾಥ್, ಕಾರ್ಮಿಕ ಸಂಘಟನೆಯ ಜಗದೀಶ್ ಸೂರ್ಯ, ರೈತ ಸಂಘಟನೆಯ ರಾಜ್ಯ ಕಾರ್ಯದರ್ಶಿ ಮಂಜುಕಿರಣ್, ಮೈಸೂರು ಜಿಲ್ಲೆಯ ತಾಲೂಕಿನ ರೈತ ಮುಖಂಡರಾದ ಶಿರಮಳ್ಳಿ ಮಂಜುನಾಥ್, ಗಳಿಗೂರುಂಟೆ ವೆಂಕಟೇಶ್, ಸಿಂಧುಹಳ್ಳಿ ವೇಣು, ಕಾಳಿಹುಂಡಿ ಸಿಂಧು ಮತ್ತಿತರರು ಪಾಲ್ಗೊಂಡಿದ್ದರು.

**ಸಂಶೋಧನ ವಿದ್ಯಾರ್ಥಿಗಳ ಸತ್ಯಾಗ್ರಹ:** ನೀಟ್ ಪರೀಕ್ಷೆಯಲ್ಲಿ ನಡೆದಿರುವ ಭ್ರಷ್ಟಾಚಾರದ ಹೊಣೆ ಹೊತ್ತು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಬೇಕೆಂದು ಆಗ್ರಹಿಸಿ ಹಾಗೂ ಸೋನಮ್ ವಾಂಗ್ಚುಕ್ ನಡೆಸುತ್ತಿರುತ್ತಿರುವ ಉಪವಾಸ ಸತ್ಯಾಗ್ರಹಣ ಬೆಂಬಲಿಸಿ ಮಾನಸ ಗಂಗೋತ್ರಿ ಗಾಂಧಿ ಭವನದ ಸಭಾಂಗಣದಲ್ಲಿ ಮೈಸೂರು ವಿವಿ ಸಂಶೋಧಕರ ಸಂಘ ಹಾಗೂ ಇನ್ನಿತರ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಒಂದು ದಿನದ ಉಪವಾಸ ಸತ್ಯಾಗ್ರಹ ನಡೆಸಿದರು.

ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ನಟರಾಜ್ ಶಿವಣ್ಣ ಮಾತನಾಡಿ, ಸಿಜೆಪಿ ಅಧ್ಯಕ್ಷ ಅಭಿಜಿತ್ ದೀಕ್ಷೆ ಮೇಲೆ ಮಸಿ ಬಳಿದಿರುವುದು ಖಂಡನೀಯ. ಪರೀಕ್ಷೆಗಳ ಬಗ್ಗೆ ಕೇಂದ್ರ ಸರ್ಕಾರ ಒಂದೇ ಒಂದು ಹೇಳಿಕೆ ಕೊಡದಿರುವುದು ಅಕ್ಷಮ್ಯ ಎಂದು ಹೇಳಿದರು. ನೆಲೆಹಿನ್ನೆಲೆ ಕೆ.ಆರ್.ಗೋಪಾಲಕೃಷ್ಣ, ದಸಂಸ ಹೋರಾಟಗಾರ ಚೋರನಹಳ್ಳಿ ಶಿವಣ್ಣ, ಚನ್ನಕೇಶವಮೂರ್ತಿ ಮಾತನಾಡಿದರು. ಸಂಶೋಧಕರ ಸಂಘದ ವರಹಳ್ಳಿ ಆನಂದ, ಗೌರವಾಧ್ಯಕ್ಷ ಕಲ್ಲಹಳ್ಳಿ ಕುಮಾರ್, ಉಪಾಧ್ಯಕ್ಷ ಕೆ. ಮಲ್ಲೇಶ್, ಗೌರವ ಸಲಹೆಗಾರರಾದ ಕೆ.ಆರ್. ರಂಗಸ್ವಾಮಿ, ಬಾಬು, ಕಾರ್ತಿಕ್ ತಗಡೂರು, ಲಕ್ಕಿ, ಪುಷ್ಪಾ ಜಾನಪದ, ಮನು ತಥಾಗತ, ಗಂಗಧರ್, ದೇವಪ್ಪ, ಶೇಷಣ್ಣಸ್ವಾಮಿ, ಪ್ರವೀಣ, ಅರುಣ, ದಲಿತ ವಿದ್ಯಾರ್ಥಿ ಒಕ್ಕೂಟ ಗಜೇಂದ್ರ ಚಿನ್ನಸ್ವಾಮಿ, ಸಾಗರ್, ಪ್ರೇಮ್ ರಾಜ, ಸಾಲುಂಡಿ ಬಸವರಾಜ, ಶ್ರೀಕಂಠ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ.ಶಿವಸ್ವಾಮಿ, ಗೋಪಾಲ, ಹಾಜರಿದ್ದರು.

### ವಿದ್ಯಾರ್ಥಿಗಳಲ್ಲೇ ಒಡಕು

ಮೈಸೂರು: ಉಪವಾಸ ಸತ್ಯಾಗ್ರಹ ಆರಂಭದಲ್ಲಿಯೇ ಸಂಶೋಧನಾ ವಿದ್ಯಾರ್ಥಿಗಳ ನಡುವೆ ವಾಗ್ವಾದ ನಡೆಯಿತು. ಶಿಷ್ಯವೇತನಕ್ಕೆ ಆಗ್ರಹಿಸಿ ನಡೆದ ಪ್ರತಿಭಟನೆಗೆ ಬೆಂಬಲ ಕೊಡದಿರುವುದರಿಂದ ಸಂಶೋಧಕರ ಸಂಘದ ಹೆಸರನ್ನು ಬಳಸದಂತೆ ಒತ್ತಾಯಿಸಿದರು. ಈ ವೇಳೆ ಮಾತಿನ ಚಕಮಕಿ ನಡೆಯಿತು. ತಳ್ಳಾಟ ನೂಕಾಟ ಮಾಡಲಾಯಿತು. ಪೊಲೀಸರು ಮಧ್ಯಪ್ರವೇಶಿಸಿ ಸಮಾಧಾನಗೊಳಿಸಿದ ಘಟನೆ ನಡೆಯಿತು.

ಜನನ- ಮರಣ ಪ್ರಮಾಣ ಪತ್ರಗಳು ಸಕಾಲದಲ್ಲಿ ನೀಡಬೇಕು : ಡಿಸಿ ಕುಮಾರ

# ಗ್ರಾಮ ಮಟ್ಟದಲ್ಲಿ ಜನನ ಮತ್ತು ಮರಣ ನೋಂದಣಿ ಪರಿಣಾಮಕಾರಿಯಾಗಿ ಆಗಬೇಕು

**ಮಂಡ್ಯ:** ಬದುಕಿರುವ ಪ್ರತಿಯೊಬ್ಬ ವ್ಯಕ್ತಿಗೆ ಜನನ ಪ್ರಮಾಣ ಪತ್ರ ಅಗತ್ಯವಾದ ದಾಖಲೆಯಾಗಿದೆ ಮತ್ತು ವ್ಯಕ್ತಿಯ ಮರಣದ ನಂತರ ಕುಟುಂಬದವರಿಗೆ ಮರಣ ಪ್ರಮಾಣಪತ್ರ ಉಪಯುಕ್ತ ದಾಖಲೆಯಾಗಿದ್ದು, ಜನನ ಮತ್ತು ಮರಣ ಪ್ರಮಾಣ ಪತ್ರಗಳು ಜನರಿಗೆ ಸಕಾಲದಲ್ಲಿ ಸಿಗುವಂತಾಗಬೇಕು ಎಂದು ಜಿಲ್ಲಾಧಿಕಾರಿ ಡಾ ಕುಮಾರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿಸೋಮವಾರ ಜಿಲ್ಲಾ ಮಟ್ಟದ ಜನನ ಮರಣ ನೋಂದಣಿ ಸಮನ್ವಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜನನ ಮತ್ತು ಮರಣಗಳ ನೋಂದಣಿಯನ್ನು ನಿಗದಿತ 21 ದಿನಗಳ ಒಳಗೆ ಕಡ್ಡಾಯವಾಗಿ ಮಾಡಬೇಕು. ವಿಳಂಬ ನೋಂದಣಿಯನ್ನು ತಡೆಯಲು ಮತ್ತು ಸಕಾಲದಲ್ಲಿ ಪ್ರಮಾಣಪತ್ರಗಳನ್ನು ನೀಡಲು ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಜನನ ಮತ್ತು ಮರಣ ನೋಂದಣಿ ಕಾರ್ಯ ಜಿಲ್ಲೆಯ ಎಲ್ಲ ಗ್ರಾಮ ಲೆಕ್ಕಿಗರು, ವೈದ್ಯಾಧಿಕಾರಿಗಳು ಹಾಗೂ ನಗರಸಭೆ ಪೌರಾಯುಕ್ತರು ಸರಿಯಾಗಿ ನಿರ್ವಹಿಸಬೇಕು. ನೋಂದಣಿ ವೇಳೆ ಸೂಕ್ತ ಪರಿಶೀಲನೆ ಕೈಗೊಂಡು ಅದರ ವರದಿ ಸಲ್ಲಿಸಬೇಕು.




ವಿಳಂಬ ನೋಂದಣಿ ಘಟನೆ ತಡೆಬೇಕು. ಯಾವುದೇ ದಾಖಲಾತಿ ಬಾಕಿ ಉಳಿಯದಂತೆ ಶೇ.100 ರಷ್ಟು ನೋಂದಣಿ ಮಾಡುವಂತೆ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಜನನ–ಮರಣ ನೋಂದಣಿ ದಾಖಲಾತಿಯಲ್ಲಿ ಯಾವುದೇ ರೀತಿಯ ತಿದ್ದುಪಡಿಗೆ ಅವಕಾಶವಿಲ್ಲ. ಸಮರ್ಪವಾಗಿ ಕಾರ್ಯನಿರ್ವಹಣೆ ಮಾಡಲು ಹಾಗೂ ನಿಗದಿಯ ಅವಧಿಯಲ್ಲಿ ನೊಂದಣಿ ಮಾಡಲು ಅಗತ್ಯ ಕ್ರಮವಹಿಸಬೇಕು ಎಂದು ಅವರು ತಿಳಿಸಿದರು.

ಗ್ರಾಮ ಮಟ್ಟದಲ್ಲಿ ಜನನ ಮತ್ತು ಮರಣ ನೋಂದಣಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಧಿಕಾರಿಗಳು ಮುಂದಾಗಬೇಕು ಎಂದು ಅವರು ತಿಳಿಸಿದರು. ನೋಂದಣಿಯಲ್ಲಿ ನಿರ್ಲಕ್ಷ್ಯ ತೋರುವ ಸಂಬಂಧಿತ ಅಧಿಕಾರಿಗಳೇ ನೇರ ಹೊಣೆಗಾರರಾಗುತ್ತಾರೆ ಎಂದು ಅವರು ತಿಳಿಸಿದರು.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಕೇಶವಮೂರ್ತಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ದೇಸಿ ಅಕ್ಕಿಗಳ ಲೋಕದ ಕದ ತಟ್ಟಿದ ಮಕ್ಕಳು

**ಮೈಸೂರು:** ನಮ್ಮ ಹಿರಿಯರು ನೂರಾರು ವರ್ಷಗಳಿಂದ ಬೆಳೆಸುತ್ತಿದ್ದ ದೇಸಿ ಅಕ್ಕಿ ತಳಿಗಳು ಸ್ಥಳೀಯ ಅನ್ನ ಸಂಸ್ಕೃತಿಯನ್ನು ಪೋಷಿಸಿವೆ. ಪೋಷಕಾಂಶಗಳಿಂದ ಸಮೃದ್ಧವಾಗಿದ್ದ ಈ ತಳಿಗಳು ಆರೋಗ್ಯವನ್ನು ಕಾಪಾಡುತ್ತಿದ್ದವು.

ಅನ್ನವೇ ಔಷಧವಾಗಿತ್ತು.ಇಂಥ ದೇಸಿ ಅಕ್ಕಿಗಳನ್ನು ಬಳಸುವ ಮೂಲಕ ಗ್ರಾಹಕರು ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ರೈತ ನಾಯಕ ಹೊನ್ನೂರು ಪ್ರಕಾಶ್ ಕರೆ ನೀಡಿದರು.
ಇ–ಪೇಪರ್ಪ್ರವೇಶ

ಸಹಜ ಸಮೃದ್ಧ, ಸಹಜ ಸೀಡ್ಸ್ ಹಾಗೂ ಭತ್ತ ಉಳಿಸಿ ಆಂದೋಲನದ ಆಶ್ರಯದಲ್ಲಿ ಮೈಸೂರಿನ ನಂಜರಾಜ ಬಹದ್ದೂರು ಛತ್ರದಲ್ಲಿ ಎರಡು ದಿನಗಳ ಕಾಲ ನಡೆದ ದೇಸಿ ಅಕ್ಕಿ ಮೇಳ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಮಕ್ಕಳ ಚಿತ್ರಕಲಾ ಸ್ಪರ್ಧೆ: ಭತ್ತದ ಲೋಕ ? ನಾ ಕಂಡಂತೆ, ಎಂಬ ವಿಷಯದಡಿ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿತ್ತು. ಕಲಾ ಶಿಕ್ಷಕ ಲೋಕೇಶ್ ಅವರು ತೀರ್ಪುಗಾರರಾಗಿದ್ದರು.

**5 ರಿಂದ 9 ವರ್ಷದೊಳಗಿನ ವಿಭಾಗ:** ಪ್ರಥಮ ಕುಶಾಲ್ ಆರ್, ದ್ವಿತೀಯ ರಿಷಿಕಾ, ತೃತೀಯ ಮೌಲ್ಯ ಎಸ್, 10 ರಿಂದ 12 ವರ್ಷದೊಳಗಿನ ವಿಭಾಗ: ಪ್ರಥಮ ? ತನೀಷ್ ಕುಮಾರ್, ದ್ವಿತೀಯ ಗೋಕುಲ್ ಆರ್ಯನ್, ತೃತೀಯ ಲಾಲಿತ್ಯ ಎಂ.ಎನ್.

**ದೇಸಿ ಅಡುಗೆಗಳ ಘಮಲು:** ಸಾಂಪ್ರದಾಯಿಕ ಮತ್ತು ಹೊಸ ಬಗೆಯ ದೇಸಿ ಅಕ್ಕಿ ಅಡುಗೆಗಳನ್ನು ಪರಿಚಯಿಸಲು ದೇಸಿ ಅಕ್ಕಿ ಅಡುಗೆ ಸ್ಪರ್ಧೆ




ನಡೆಯಿತು. ಮಾಪಿಳ್ಳೆ ಸಾಂಬ ಇಡಿಯಪ್ಪಂ, ಕಚಡಿಸಾಂಬ ಕಿಚಡಿ, ಕಪ್ಪಕ್ಕಿ ಪಾಯಸ, ಕೆಂಪಕ್ಕಿ ಶಾವಿಗೆ, ಕೆಂಪಕ್ಕಿ ಪಾಯಸ, ಅವಲಕ್ಕಿ ಪಾಯಸ, ಪರಿಮಳದಕ್ಕಿ ಪಲಾವ್ ಮೊದಲಾದ 25ಕ್ಕೂ ಹೆಚ್ಚು ಖಾದ್ಯಗಳು ಸ್ಪರ್ಧೆಗೆ ಬಂದಿದ್ದವು.

**ತೀರ್ಪುಗಾರರು:** ಕೃಷ್ಣಿ ಶಿರೂರು, ಸೈಯದ್ ಘನಿಖಾನ್, ಪಾಂಡುರಂಗ ಭಟ್

**ವಿಜೇತರು:** ಪ್ರಥಮ ಭಾರತಿ

**ದ್ವಿತೀಯ ನಾಗಮಣಿ ವಿರುಪಾಕ್ಷ:** ಅಡುಗೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ಹೆಸರಾಂತ ಭತ್ತ ಕೃಷಿಕ ಕಿರುಗಾವಲಿನ ಸೈಯದ್ ಘನಿಖಾನ್ ಅವರು, ಅಡುಗೆ ಮನೆ ದೇಸಿ ಅಕ್ಕಿಗಳ ಭಂಡಾರವಾಗಬೇಕು ವೈವಿಧ್ಯಮಯ ದೇಸಿ ಅಕ್ಕಿಗಳನ್ನು ದಿನ ನಿತ್ಯದ ಆಹಾರದಲ್ಲಿ ಬಳಸುವ ಮೂಲಕ ಕುಟುಂಬದ ಆರೋಗ್ಯ ಕಾಪಾಡಿಕೊಳ್ಳಬೇಕುಎಂದು ಅಭಿಪ್ರಾಯಪಟ್ಟರು.

ದೇಸಿ ಅಕ್ಕಿಗಳಿಗೆ ಮನಸೋತ ಗ್ರಾಹಕರು

ಎರಡು ದಿನಗಳ ದೇಸಿ ಅಕ್ಕಿ ಮೇಳ ಜನರನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು. ಯುವ ದಂಪತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ರಾಜಮುಡಿ ಅಕ್ಕಿಮತ್ತು ಕಾಲಾ ಬಾತ್ ಕಪ್ಪು ಅಕ್ಕಿ ಗೆ ವಿಶೇಷ ಬೇಡಿಕೆ ಇತ್ತು. ಗಂಧಸಾಲೆಯ ಪರಿಮಳ ಕ್ಕೆ ಗ್ರಾಹಕರು ಮನಸೋತರು. ದೇಸಿ ಸೀಡ್ ಪ್ರೊ?ರಡ್ಯೂಸರ್ ಕಂಪನಿ ಮತ್ತು ದೇವ ಧಾನ್ಯ ರೈತ ಕಂಪನಿ ಒಟ್ಟು 25 ಕ್ವಿಂಟಲ್ ದೇಸಿ ಅಕ್ಕಿಗಳನ್ನು ಮಾರಾಟ ಮಾಡಿದವು.

ಒಟ್ಟಿನಲ್ಲಿ ಮೈಸೂರಿನ ಗ್ರಾಹಕರಲ್ಲಿ ದೇಸಿ ಅಕ್ಕಿಗಳ ಮಹತ್ ದ ಬಗ್ಗೆ ಅರಿವು ಮೂಡಿಸುವಲ್ಲಿ ದೇಸಿ ಅಕ್ಕಿ ಮೇಳ ಯಶಸ್ವಿಯಾಗಿದೆ.

ಸಫಾಯಿ ಕರ್ಮಚಾರಿ ಆಯೋಗದ ಸದಸ್ಯ ಸಿ.ಶಂಕರ ಅಂಕನಶೆಟ್ಟಿಪುರ ಸೂಚನೆ

# ಸ್ವಚ್ಛತಾ ಕಾರ್ಮಿಕರಿಗೆ ಸರ್ಕಾರದ ಸೌಲಭ್ಯ ಸಮರ್ಪಕವಾಗಿ ತಲುಪಿಸಿ: ಶಂಕರ್

**ಮಂಡ್ಯ :** ಸ್ವಚ್ಚತಾ ಕಾರ್ಮಿಕರಿಗೆ ಸರ್ಕಾರದ ಸೌಲಭ್ಯ,ಸವಲತ್ತುಗಳನ್ನು ನಿಗದಿತ ಕಾಲಮಿತಿಯಲ್ಲಿ ಸಮರ್ಪಕವಾಗಿ ತಲುಪಿಸಲು ಮುಂದಾಗುವಂತೆ ಅಧಿಕಾರಿಗಳಿಗೆ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯ ಸಿ.ಶಂಕರ ಅಂಕನಶೆಟ್ಟಿಪುರ ಸೂಚನೆ ನೀಡಿದರು.

ಸೋಮವಾರ ಮಂಡ್ಯ ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ಮಂಡ್ಯ ತಾಲ್ಲೂಕು ಪಂಚಾಯತ್ ವ್ಯಾಪ್ತಿಯಲ್ಲಿ ರುವ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ಬರುವ ಸ್ವಚ್ಛತಾ ಕಾರ್ಮಿಕರೊಂದಿಗೆ ನೇರ ಸಂವಾದ ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು.

ಸರ್ಕಾರದ ಮಾರ್ಗಸೂಚಿಗಳನ್ವಯ ಸ್ವಚ್ಛತಾ ಕಾರ್ಮಿಕರಿಗೆ ಸೌಲಭ್ಯಗಳನ್ನು ತಲುಪಿಸು ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿದಲ್ಲಿ ಆಯೋಗದ ವತಿಯಿಂದ ನಿರ್ದಾಕ್ಷಿಣ್ಯ ಕ್ರಮ ವಹಿಸಲಾಗುವುದು. ಪ್ರತಿನಿತ್ಯ ನಗರ ಸ್ವಚ್ಛತೆ ಮಾಡುವ ಸ್ವಚ್ಛತಾ ಕಾರ್ಮಿಕರಿಗೆ ಹಿತ ಕಾಪಾಡಲು ಅಧಿಕಾರಿಗಳು ಬದ್ಧವಾಗಿರಬೇಕು. ಸ್ವಚ್ಛತಾ ಕಾರ್ಮಿಕರಿಗೆ ಜೀವನ ನಿರ್ವಹಣೆಗೆ ತೊಂದರೆಯಾಗದಂತೆ ಪ್ರತಿ ತಿಂಗಳ 5 ರೊಳಗೆ ವೇತನ ಪಾವತಿಸಬೇಕು. ಸಮವಸ್ತ್ರ, ಕೈಗೌಸ್, ಗಮ್‌ಬೂಟ್, ಮಾಸ್ಕ್ ಸೇರಿದಂತೆ ಆರೋಗ್ಯ ಸುರಕ್ಷಾ ಪರಿಕರಗಳನ್ನು ಸಮರ್ಪಕವಾಗಿ ಒದಗಿಸಬೇಕು ಎಂದು ತಿಳಿಸಿದರು.



ಸಫಾಯಿ ಕರ್ಮಚಾರಿಗಳು, ನಗರ ಮತ್ತು ಗ್ರಾಮೀಣ ಪ್ರದೇಶಗಳ ಸ್ವಚ್ಛತೆ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಅವರ ಶ್ರಮಕ್ಕೆ ತಕ್ಕಂತೆ ವೇತನವನ್ನು ಸಮಯಕ್ಕೆ ಸರಿಯಾಗಿ ನೀಡುವುದು. ಕಾರ್ಮಿಕರ ಹಕ್ಕುಗಳಿಗೆ ಯಾವುದೇ ರೀತಿಯ ಧಕ್ಕೆಯಾಗದಂತೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು? ಎಂದು ಹೇಳಿದರು.

ಸಫಾಯಿ ಕರ್ಮಚಾರಿ ಕುಟುಂಬಗಳ ಮಕ್ಕಳು ಉತ್ತಮ ಶಿಕ್ಷಣ ಪಡೆದು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂಬ ಸರ್ಕಾರ ಅನೇಕ ಯೋಜನೆಗಳನ್ನು ರೂಪಿಸಿದೆ. ಆ ಸವಲತ್ತುಗಳು ಅವರಿಗೆ ತಲಪುವ ಕೆಲಸ ಆಗಬೇಕು ಎಂದು ಅವರು ತಿಳಿಸಿದರು.

ಸ್ವಚ್ಛತಾ ಕಾರ್ಮಿಕರಿಗೆ (ಪೌರಕಾರ್ಮಿಕರಿಗೆ) ನಿಯಮಿತವಾಗಿ ಆರೋಗ್ಯ ತಪಾಸಣೆ ನಡೆಸುವುದು ಅತ್ಯಂತ ಮುಖ್ಯ. ಆರೋಗ್ಯ ತಪಾಸಣೆ ಮಾಡಿಸಬೇಕು ಹಾಗೂ ಕರ್ನಾಟಕ ಸರ್ಕಾರದಿಂದ ಸ್ವಚ್ಛತಾ ಮತ್ತು ಪೌರ ಕಾರ್ಮಿಕರ ಆರೋಗ್ಯ, ಸುರಕ್ಷತೆ ಹಾಗೂ ಆರ್ಥಿಕ ಭದ್ರತೆಗಾಗಿ ವಿಶೇಷ ಯೋಜನೆಗಳನ್ನು ಜಾರಿಗೊಳಿಸಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಪೌರ ಕಾರ್ಮಿಕರಿಗೆ ಈ ಬಗ್ಗೆ ಅರಿವು ಮೂಡಿಸಿ, ಅದನ್ನು ಯೋಜನೆ ತಲಪುವಂತೆ ಕೆಲಸ ನಿರ್ವಹಣೆ ಮಾಡಬೇಕು ಎಂದು ಅವರು ತಿಳಿಸಿದರು.

ಪೌರ ಕಾರ್ಮಿಕರ ಆರೋಗ್ಯದ ದೃಷ್ಟಿಯಿಂದ ಎಲ್ಲ ರೀತಿಯ ಪರಿಕರಗಳನ್ನು ಒದಗಿಸುವುದುಹ ಆಯುಷ್ಮಾನ್ ಕಾರ್ಡ್ ವಿತರಣೆ, ಆಧುನಿಕ ಪರಿಕರಗಳನ್ನು ಕೊಟ್ಟು, ಅದಕ್ಕೆ ತಕ್ಕಂತೆ ತರಬೇತಿ ಒದಗಿಸುವುದು, ಆರೋಗ್ಯ ತಪಾಸಣೆ ಮಾಡುವುದು ಸೇರಿದಂತೆ ಇತರೆ ವಿಷಯಗಳ ಬಗ್ಗೆ ಅಧಿಕಾರಿಗಳು ಅಗತ್ಯ ಕ್ರಮವಹಿಸಬೇಕು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಶ್ರೀನಿವಾಸ್ ಮಂಡ್ಯ ತಾಲೂಕ್ ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಲೋಕೇಶ್ ಮೂರ್ತಿ ಹಾಗೂ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

# ದೊಡ್ಡಬ್ಯಾರಹಳ್ಳಿ ಗ್ರಾಮದಲ್ಲಿ ಜು.26ರಂದು ರಾಜ್ಯಮಟ್ಟದ ಗಾಳಿಪಟ, ಗುಂಡು ಎತ್ತುವ ಹಾಗೂ ರಂಗೋಲಿ ಸ್ಪರ್ಧೆ

**ಮಂಡ್ಯ:** ಪ್ರಥಮ ಏಕಾದಶಿಯ ಹಿನ್ನಲೆ ಜು.26ರಂದು ತಾಲೂಕಿನ ದೊಡ್ಡಬ್ಯಾರಹಳ್ಳಿ ಗ್ರಾಮದಲ್ಲಿ ರಾಜ್ಯ ಮಟ್ಟದ ರಂಗೋಲಿ, ಗುಂಡು ಎತ್ತುವ ಮತ್ತು ಗಾಳಿಪಟ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಗ್ರಾಮದ ಕಾರ್ಯಕ್ರಮ ಆಯೋಜನಾ ಸಮಿತಿಯ ಸಂತೋಷ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಾಳಿಪಟ ಸ್ಪರ್ಧೆಯು ದೊಡ್ಡಬ್ಯಾಡರಹಳ್ಳಿ ಗ್ರಾಮದಲ್ಲಿಯೇ ಪ್ರಾರಂಭವಾಗಿರುವ ಇತಿಹಾಸ ಹೊಂದಿದೆ. ಗ್ರಾಮೀಣ ಕೀಡೆಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಪ್ರಯತ್ನದ ಹಿನ್ನಲೆ ರಾಜ್ಯ ಮಟ್ಟದ ಸ್ಪರ್ಧೆ ಆಯೋಜನೆಗೆ ಮುಂದಾಗಿದ್ದೇವೆ ಎಂದರು.

ಗಾಳಿಪಟ ಸ್ಪರ್ಧೆಯು ದೊಡ್ಡ, ಮಧ್ಯಮ ಹಾಗೂ ಸಣ್ಣ ಗಾಳಿಪಟ ಎಂಬ 3 ವಿಭಾಗಗಳಲ್ಲಿ ನಡೆಯಲಿದೆ. ಗುಂಡು ಎತ್ತುವ ಸ್ಪರ್ಧೆಯಲ್ಲಿ ಗ್ರಾಮದ ರಾಜು ಎಂಬುವವರು 9 ವರ್ಷದಿಂದ ಸತತವಾಗಿ ಗೆಲುವು ಸಾಧಿಸಿ, ಮುಂದಿನ ಪೀಳಿಗೆಗೆ ಅವಕಾಶ ನೀಡಲು ಸ್ಪರ್ಧಿಸದಿರಲು ನಿರ್ಧರಿಸಿದ್ದಾರೆ. ಮಹಿಳೆಯರಿಗೂ ಪ್ರೋತ್ಸಾಹ ನೀಡಲು ರಂಗೋಲಿ ಸ್ಪರ್ಧೆ ನಡೆಯಲಿದೆ ಎಂದು ಹೇಳಿದರು.

ಗಾಳಿಪಟ ಸ್ಪರ್ಧೆಯ ದೊಡ್ಡ ಪಟ ವಿಭಾಗಕ್ಕೆ ಪ್ರಥಮ 2000, ದ್ವಿತೀಯ 1500, ತೃತೀಯ 1000, ಮಧ್ಯಮ ಪಟ ವಿಭಾಗಕ್ಕೆ ಪ್ರಥಮ 1500, ದ್ವಿತೀಯ 1000, ತೃತೀಯ 500, ಸಣ್ಣಪಟ ವಿಭಾಗಕ್ಕೆ 1000, 750, 500 ರೂ.ಗಳ ಬಹುಮಾನ, ಗುಂಡು ಎತ್ತುವ ಸ್ಪರ್ಧೆಗೆ ಪ್ರಥಮ 3000, ದ್ವಿತೀಯ 2000, ತೃತೀಯ 1000 ರೂ.ಗಳ ಬಹುಮಾನ ಹಾಗೂ ರಂಗೋಲಿ ಸ್ಪರ್ಧೆಗೆ ಪ್ರಥಮ 1000, ದ್ವಿತೀಯ 750 ಹಾಗೂ ತೃತೀಯ 500 ರೂ.ಗಳ ಬಹುಮಾನ ನಿಗಧಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಗಾಳಿಪಟ ಹಾಗೂ ರಂಗೋಲಿ ಸ್ಪರ್ಧೆಯು ಮಧ್ಯಾಹ್ನ 2ರಿಂದ, ಗುಂಡು ಎತ್ತುವ ಸ್ಪರ್ಧೆಯು ಮಧ್ಯಾಹ್ನ 3ರಿಂದ ಮತ್ತು ರಾತ್ರಿ 7 ಗಂಟೆಗೆ ರಾಜ ಸುಯೋಧನ ಎಂಬ ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ. ಸ್ಪರ್ಧೆಗಳ ತೀರ್ಪುಗಾರರಾಗಿ ಗ್ರಾಮದವರಲ್ಲದ ದೈಹಿಕ ಶಿಕ್ಷಕರನ್ನು ನೇಮಕ ಮಾಡಲಾಗುವುದು. ಬೆಳಿಗ್ಗೆಯಿಂದಲೇ ಜೀವಧಾರೆ ಟ್ರಸ್ಟಿನಿಂದ ರಕ್ತದಾನ ಶಿಬಿರ ನಡೆಯಲಿದೆ ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಪಟೇಲ್ ಆನಂದ, ಮಂಡ್ಯ ಕೋಳಿ ಸಾಗಾಣೆ ಸಂಗದ ಆನಂದ್, ಮನೋಜ್, ರಾಜು ಇದ್ದರು.



# ಭವಿಷ್ಯದ ಯುವ ಪೀಳಿಗೆಗೆ ಸಂವಿಧಾನ ಅರಿವು ಅಗತ್ಯ: ಪ್ರೊ. ಜಯಪ್ರಕಾಶ್ ಗೌಡ



**ಮಂಡ್ಯ:** ಭವಿಷ್ಯದ ಯುವ ಪೀಳಿಗೆಗೆ ಸಂವಿಧಾನ ಹಾಗೂ ಸಂವಿಧಾನದಲ್ಲಿ ಭಾರತೀಯರಿಗೆ ಕೊಡಮಾಡುವ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಮಹೇಶ್ ಇರಸವಾಡಿ ಅವರ 'ಭಾರತೀಯ ಸಂವಿಧಾನ – ಭಾರತೀಯರ ಹಕ್ಕುಗಳು ಮತ್ತು ಕರ್ತವ್ಯಗಳು' ಕೃತಿ ತಿಳಿಸಲಿದೆ ಎಂದು ಕರ್ನಾಟಕ ಸಂಘದ ಪ್ರೊ.ಜಯಪ್ರಕಾಶ ಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕೃತಿಯನ್ನು ಸಾಂಕೇತಿಕವಾಗಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಯುವಕ, ಯುವತಿಯರಿಗೆ ಶಾಲೆ– ಕಾಲೇಜು ಹಂತದಲ್ಲೇ ವಿದ್ಯಾರ್ಥಿ ದಿಸೆಯಲ್ಲಿ ಸಂವಿಧಾನ ತಿಳಿಸುವ ಪ್ರಯತ್ನ ಇದಾಗಿದೆ. ಈ ನಿಟ್ಟಿನಲ್ಲಿ ಮಹೇಶ್ ಇರಸವಾಡಿ ಅವರು ಭಾಷೆ ಸರಳೀಕರಣಗೊಳಿಸಿ ಬರೆದಿರುವ ಕೃತಿ ವಿದ್ಯಾರ್ಥಿಗಳಿಗೆ ಸಹಕಾರವಾಗಲಿದೆ ಎಂದು ಹೇಳಿದರು.

ಲಯನ್ಸ್ ಕ್ಲಬ್ ಆಫ್ ಮೈಸೂರು ಪರಿವರ್ತನ ಸಂಸ್ಥೆಯ ಕಾರ್ಯದರ್ಶಿ ಎಚ್.ಎಂ.ಸತೀಶ್ ಮಾತನಾಡಿ, ಕಳೆದ 3 ತಿಂಗಳಿಂದ ಕೃತಿಯ ಪ್ರತಿಗಳನ್ನು ಮಂಡ್ಯ, ಮೈಸೂರು ಹಾಗೂ ಚಾಮರಾಜನಗರಗಳಲ್ಲಿ ವಿತರಣೆ ಮಾಡಲಾಗುತ್ತಿದೆ. ಈಗಾಗಲೇ ಚಾಮರಾಜನಗರ ಜಿಲ್ಲೆಯಲ್ಲಿ 1000, ಮೈಸೂರಿನಲ್ಲಿ 3000 ಸಾವಿರ ವಿತರಣೆ ಮಾಡಿದ್ದು, 3 ಜಿಲ್ಲೆಗಳಲ್ಲಿ ತಲಾ 20,000 ಕೃತಿಗಳನ್ನು ವಿತರಣೆ ಮಾಡುವ ಗುರಿ ಹೊಂದಲಾಗಿದೆ ಎಂದರು.

ಸಂವಿಧಾನ ಸಂಬಂಧ ಈ ಮೂರು ಜಿಲ್ಲೆಗಳ ಕಾಲೇಜು ವಿದ್ಯಾರ್ಥಿಗಳಿಗೆ ಚರ್ಚಾ ಸ್ಪರ್ಧೆ ಆಯೋಜಿಸಲಾಗುವುದು. ಈ ಮೂಲಕ ಎಲ್ಲ ವಿದ್ಯಾರ್ಥಿಗಳಿಗೆ ಕರ್ತವ್ಯ ತಿಳಿಸುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಎಂ.ಬಿ.ನಾಗಣ್ಣ ಗೌಡ, ಕೊಮ್ಮೇರಹಳ್ಳಿ ಕೃಷ್ಣಮೂರ್ತಿ, ಎಂ.ಎಂ.ಫೌಂಡೇಷನ್ ಅಧ್ಯಕ್ಷ ಮಹಲಿಂಗೇಗೌಡ, ಕೃತಿಯ ಕರ್ತೃ ಮಹೇಶ್ ಇರಸವಾಡಿ ಇದ್ದರು.

# ಇಂದು ಪೂರ್ವಭಾವಿ ಸಭೆ

**ರಾಮನಗರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮವನ್ನು ಜು. 29ರಂದು ಆಚರಣೆ ಮಾಡುವ ಸಂಬಂಧ ಜು. 21ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಪೂರ್ವಭಾವಿ ಸಭೆಯನ್ನು ನಗರದ ಕಂದಾಯಭವನದ ಮೂರನೇ ಮಹಡಿಯಲ್ಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಏರ್ಪಡಿಸಲಾಗಿದೆ. ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮ ಆಚರಣೆಯ ರೂಪುರೇಷಗಳ ಕುರಿತು ಚರ್ಚಿಸಲು ಜಿಲ್ಲೆಯ ಎಲ್ಲಾ ಸಮುದಾಯದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಮುಖಂಡರು, ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಪೂರ್ವಭಾವಿ ಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೆ.ಎ.ಐ.ಡಿ.ಬಿ ಇಂಜಿನಿಯರ್ ವಿರುದ್ಧ ಅಪಪ್ರಚಾರ ಖಂಡಿಸಿ ಪ್ರತಿಭಟನೆ

**ಹಾಸನ:** ಕೆ.ಎ.ಐ.ಡಿ.ಬಿ ಕಾರ್ಯಪಾಲಕ ಅಭಿಯಂತರರಾದ ಸುನಿಲ್ ಕುಮಾರ್ ಅವರ ಮೇಲಿನ ಸುಳ್ಳು ಆರೋಪ ಖಂಡಿಸಿ ಕೈಗಾರಿಕಾ ಪ್ರದೇಶದ ಕೆ.ಎ.ಐ.ಡಿ.ಬಿ ಕಚೇರಿ ಎದುರು ಸುತ್ತಮುತ್ತಲ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಈ ವೇಳೆ ಬೋರೇಗೌಡ ಎಂಟರ್ಪ್ರೈಸಸ್ ಮಾಲೀಕ ಕಾಂತರಾಜ್ ಮಾತನಾಡಿ, ಹೊಸಕೊಪ್ಪಲು ನಿವಾಸಿ ನಗರಸಭೆ ಮಾಜಿ ಸದಸ್ಯ ಜೆಸಿಬಿ ಸುರೇಶ್ ಕುಮಾರ್ ಎಂಬುವವರು ಕೆ.ಎ.ಐ.ಡಿ.ಬಿ ಕಾರ್ಯಪಾಲಕ ಅಭಿಯಂತರರಾದ ಸುನಿಲ್ ಕುಮಾರ್ ಅವರು ಕೈಗಾರಿಕೆ ನಡೆಸಲು ನಿವೇಶನ ನೀಡುವುದಾಗಿ ತನ್ನಿಂದ ಲಕ್ಷಾಂತರ ರೂಪಾಯಿ ಹಣವನ್ನು ಲಂಚವಾಗಿ ಪಡೆದಿದ್ದಾರೆ ಎಂದು ಆರೋಪಿಸಿದ್ದಾರೆ ಇದು ಸತ್ಯಕ್ಕೆ ದೂರವಾಗಿದೆ ಎಂದರು.

ಈಗಾಗಲೇ ಈ ಬಗ್ಗೆ ಇಂಜಿನಿಯರ್ ಸುನಿಲ್ ಕುಮಾರ್ ಅವರು ಸುರೇಶ್ ಕುಮಾರ್ ಅವರು ಮಾಡಿರುವ ಆರೋಪದ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿ ಕಾನೂನು ಹೋರಾಟ ಆರಂಭಿಸಿದ್ದಾರೆ. ಸುರೇಶ್ ಕುಮಾರ್ ಅವರು ತಾನು ಹಣ ನೀಡಿರುವ ದಾಖಲೆ ಇದೆ ಎಂದು ಹೇಳಿದ್ದಾರೆ ಆ ರೀತಿ ಅವರ ಬಳಿ ದಾಖಲೆಗಳಿದ್ದರೆ ಬಹಿರಂಗಪಡಿಸಲಿ ಅದನ್ನು ಬಿಟ್ಟು ವೈಯಕ್ತಿಕ ಹಿತಾಸಕ್ತಿಗಾಗಿ ಇನ್ನೊಬ್ಬರ ಮೇಲೆ ಸುಳ್ಳು ಆರೋಪ ಮಾಡುವುದು ಸರಿಯಲ್ಲ ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ಸುರೇಶ್ ಕುಮಾರ್ ಅವರು ಕೆಎಐಡಿಬಿ ಯಲ್ಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದಾಗ ಅರ್ಜಿ ಪುರಸ್ಕಾರಗೊಂಡಿದೆ ಆದರೆ ಅವರು ತನಗೆ ಹೆಚ್ಚುವರಿ ಜಾಗ ಬೇಕು ಎಂದು ಬೇಡಿಕೆ ಇಟ್ಟಾಗ ಕಾನೂನು ಅಡಿಯಲ್ಲಿ ಅದನ್ನು ನೀಡಲು ಬರುವುದಿಲ್ಲ ಎಂದು ಅಧಿಕಾರಿಗಳು ಅರ್ಜಿಯನ್ನು ಕಾಯ್ದಿರಿಸಿದ್ದಾರೆ ಅಲ್ಲದೆ ಪ್ರಮುಖ ರಸ್ತೆ ಬದಿಯಲ್ಲಿ ಜಾಗ ಬೇಕು ಎಂಬುದು ಕೂಡ ಅವರ ಬೇಡಿಕೆಯಾಗಿದೆ ಈ ಎಲ್ಲದಕ್ಕೂ ಒಪ್ಪದೇ ಇರುವ ಕಾರಣ ಅಧಿಕಾರಿಗಳ ಮೇಲೆ ಆರೋಪಗಳನ್ನು ಮಾಡಿ ತೇಜೋದೆ ಮಾಡುವ ಕೆಲಸ ಮಾಡುತ್ತಿದ್ದಾರೆ ಎಂದರು. ಸುನಿಲ್ ಕುಮಾರ್ ಅವರು ಅಭಿಯಂತರಾಗಿ ಬಂದ ನಂತರ ಕೆಎಐಡಿಬಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ, ಸಾಕಷ್ಟು ಅಭಿವೃದ್ಧಿ ಕೆಲಸಗಳು ನಡೆಯುತ್ತಿದೆ ನಿಷ್ಠಾವಂತ ಪ್ರಾಮಾಣಿಕ ಅಧಿಕಾರಿಗಳ ಮೇಲೆ ಈ ರೀತಿ ಆರೋಪಗಳನ್ನು ಮಾಡಿ ಅವರ ವೃತ್ತಿ ಬದುಕಿನ ಮೇಲೆ ಕಪ್ಪು ಚುಕ್ಕಿ ತರುವ ಕೆಲಸ ಮಾಡಬಾರದು ಇಂಥವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.



ಈ ಸಂದರ್ಭದಲ್ಲಿ ಸುತ್ತಮುತ್ತಲ ಗ್ರಾಮಸ್ಥರಾದ ಮಧು, ದೇವರಾಜೇಗೌಡ, ಶ್ರೀನಿವಾಸ್, ನಾಗರಾಜ, ಸತೀಶ, ನಾರಾಯಣಗೌಡ, ಇತರರು ಇದ್ದರು.

# ಮಂಟೇಸ್ವಾಮಿ ಪರಂಪರೆ ಉಳಿಸುವುದು ಪ್ರತಿಯೊಬ್ಬರ ಜವಾಬ್ದಾರಿ

## 'ಹಳ್ಳಿ ಹಕ್ಕಿ ಹಾಡು' ಜಾನಪದ ಕಾರ್ಯಕ್ರಮ ಶ್ರೀಕಂಠಸಿದ್ದಲಿಂಗರಾಜೇ ಅರಸು ಹೇಳಿಕೆ

**ಭಾರತೀನಗರ:** ಜಾತ್ಯಾತೀತತೆ, ಸರಳತೆ ಹಾಗೂ ಸೇವಾ ಮನೋಭಾವದೊಂದಿಗೆ ಕಳೆದ 600 ವರ್ಷಗಳಿಂದ ಮಂಟೇಸ್ವಾಮಿ–ಸಿದ್ದಪ್ಪಾಜಿ ನೀಲಗಾರರ ಪರಂಪರೆಯನ್ನು ಜೀವಂತವಾಗಿ ಉಳಿಸಿಕೊಂಡು ಬರಲಾಗುತ್ತಿದೆ ಎಂದು ಮಳವಳ್ಳಿ ಹೊನ್ನಾಯಕನಹಳ್ಳಿ ಮಂಟೇಸ್ವಾಮಿ ಮಠ ಹಾಗೂ ಕಪ್ಪಡಿ ಕ್ಷೇತ್ರದ ಮಠಾಧೀಪತಿಗಳಾದ ಎಂ.ಎಲ್. ವರ್ಚಸ್ವಿ ಶ್ರೀಕಂಠಸಿದ್ದಲಿಂಗರಾಜೇ ಅರಸು ಹೇಳಿದರು.

ಸಮೀಪದ ಹೊನ್ನಾಯಕನಹಳ್ಳಿಯ ಮಠದ ಹೊರ ಭಾಗದಲ್ಲಿ ನಡೆದ ಶ್ರೀ ಗುರುಸಿದ್ದಪ್ಪಾಜಿ ಜಾತ್ರೆ ಹಾಗೂ ಸೇವಾ ಮಹೋತ್ಸವ ಅಂಗವಾಗಿ, ಮೈಸೂರು ಪಡುವರಹಳ್ಳಿಯ ಅಶ್ವ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಲಾ ಟ್ರಸ್ಟ್ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ 'ಹಳ್ಳಿ ಹಕ್ಕಿ ಹಾಡು' ಜಾನಪದ ಕಾರ್ಯಕ್ರಮವನ್ನು ತಂಬೂರಿ ವೀಣೆ ನುಡಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಪೂರ್ವಜರಿಂದ ಬಂದಿರುವ ನೀಲಗಾರರ ಸೇವಾ ಪರಂಪರೆಯನ್ನು ಸಂಪ್ರದಾಯಬದ್ಧವಾಗಿ ಮುಂದುವರಿಸಿಕೊಂಡು ಬರಲಾಗುತ್ತಿದೆ. ಮಂಟೇಸ್ವಾಮಿ ಪರಂಪರೆಯಲ್ಲಿ ಆಡಂಬರವಿಲ್ಲ; ಸರಳತೆ ಮತ್ತು ಮಾನವೀಯ ಮೌಲ್ಯಗಳಿಗೆ ಆದ್ಯತೆ ಇದೆ. ಈ ಪರಂಪರೆಯ ವಿಚಾರಗಳನ್ನು ಅರ್ಥಮಾಡಿಕೊಂಡು ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಹೇಳಿದರು.




ಮಳವಳ್ಳಿ ಮಹದೇವಸ್ವಾಮಿ ಕಳೆದ 50 ವರ್ಷಗಳಿಂದ ಜಾನಪದ ಕಲೆಯನ್ನು ಉಳಿಸಿ ಬೆಳೆಸುತ್ತಿರುವುದು ಶ್ಲಾಘನೀಯ. ಜಾನಪದ ಕಲೆಯ ಮೂಲಕ ಮಹನೀಯರ ಚರಿತ್ರೆ ಹಾಗೂ ಸಂಸ್ಕೃತಿ ವಿಶ್ವಕ್ಕೆ ಪರಿಚಯವಾಗಬೇಕು ಎಂದರು.

ಮರಗಳ ನಾಶ ಹಾಗೂ ಪ್ಲಾಸ್ಟಿಕ್ ಬಳಕೆ ಹೆಚ್ಚುತ್ತಿರುವುದರಿಂದ ಪರಿಸರ ಹಾನಿಗೊಳಗಾಗುತ್ತಿದ್ದು, ಅತಿವೃಷ್ಟಿ ಮತ್ತು ಅನಾವೃಷ್ಟಿಯಂತಹ ಸಮಸ್ಯೆಗಳು ಎದುರಾಗುತ್ತಿವೆ. ಗಿಡಗಳನ್ನು ಬೆಳೆಸಿ, ಪ್ಲಾಸ್ಟಿಕ್ ಬಳಕೆಯನ್ನು ತಗ್ಗಿಸುವ ಮೂಲಕ ಪರಿಸರ ಸಂರಕ್ಷಣೆಗೆ ಎಲ್ಲರೂ ಕೈಜೋಡಿಸಬೇಕು. ಮಂಟೇಸ್ವಾಮಿಯ ಕೃಪೆಯಿಂದ ಉತ್ತಮ ಮಳೆ ಬಂದು ರೈತರು ಸಮೃದ್ಧ ಜೀವನ ನಡೆಸುವಂತಾಗಲಿ ಎಂದು ಆಶಿಸಿದರು.

ಅಂತರರಾಷ್ಟ್ರೀಯ ಜಾನಪದ ಕಲಾವಿದ ಮಳವಳ್ಳಿ ಮಹದೇವಸ್ವಾಮಿ ಮಾತನಾಡಿ, ಗ್ರಾಮೀಣ ಜಾನಪದ ಕಲೆಗಳು ಉಳಿಯಬೇಕಿದ್ದು, ಎಲೆಮರೆಕಾಯಿಯಂತಿರುವ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯವನ್ನು ಅಶ್ವ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ನಿರಂತರವಾಗಿ ಮಾಡುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಾನಪದ ಗಾಯನ, ಸೋಬಾನೆ ಪದ, ಪೂಜಾಕುಣಿತ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನ ಸೆಳೆದವು. ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಸಿದ್ದೇಗೌಡ, ಪ್ರಕಾಶ್, ಕುಳ್ಳಪ್ಪ, ಸ್ವಾಮಿ, ಶ್ರೀನಿವಾಸ್, ರಾಜಣ್ಣ, ವಿಷಕಂಠ, ಯೋಗನಂದ, ವೆಂಕಟಪ್ಪ, ನಂಜುಂಡಪ್ಪ, ಸೋಮಜಮ್ಮ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

# ನಿಷ್ಟುರ ಶಿವಭಕ್ತ ಶಿವಲೆಂಕ ಮಂಚಣ್ಣ



| ವೀಣಾ ಹೇಮಂತ್‌ಗೌಡ ಪಾಟೀಲ್

ಬಸವಣ್ಣನವರ ಸಮಕಾಲೀನರಾಗಿದ್ದ ಶಿವಲೆಂಕ ಮಂಚಣ್ಣನವರು ತಮ್ಮನ್ನು ತಾವು ಶಿವನ ಸೇವಕ ಎಂದು ಕರೆದುಕೊಂಡವರು. ಲೆಂಕ ಎಂದರೆ ದಾಸ ಎಂದರ್ಥ. 1160 ಇವರ ಕಾಲಮಾನವಾಗಿದ್ದು ಇವರು ಮೂಲತಹ ಕಾಶಿಯವರು.

ಕಾಶಿಯ ಪ್ರಸಿದ್ಧ ವಿದ್ವಾಂಸರಾದ ಶಿವ ಭಟ್ಟರ ಮಗ ಹಾಗೂ ಸೋಮಶೃಂಗ ದೇಶಿಕರ ಮೊಮ್ಮಗನಾದ ಮಂಚಣ್ಣನವರು ಘನ ಪಂಡಿತರಾಗಿದ್ದರು. ಎಲ್ಲ ದೇವರಲ್ಲಿ ಶಿವನೇ ಶ್ರೇಷ್ಠ ಎಂದು ಶಿವಾಧಿಕ್ಯವನ್ನು ಇವರು ಸಾರುತ್ತಿದ್ದರು. ತಮ್ಮವಾದ ಚಾತುರ್ಯದಿಂದ ವೈಷ್ಣವರನ್ನು ಮಣಿಸಿ ವೈಷ್ಣವರು ಶಿವನ ದೇಗುಲಕ್ಕೆ ಬಂದು ನಮಸ್ಕರಿಸುವಂತೆ ಮಾಡುವಲ್ಲಿ ಅವರು ಯಶಸ್ವಿಯಾಗಿದ್ದರು.

**ಧರೆಯೊಳಗೆ ಶಿವಲೆಂಕ**
**ಮಂಚಣ್ಣನೆಂಬಾತ**
**ಬೆರಳುಗಳ ವಿಶ್ವೇಶ್ವರಂಗಿತ್ತು ನಡೆಯುತಿರೆ**
**ಪರವಾದಿಗಳ ನಗುತ ಜರೆಯಲಾಕ್ಷಣಂ**
**ವಿಷ್ಣುಮೂರ್ತಿಯನೊಂದನು**
**ಹರುಷದಿಂದ ನಡೆಸಿ ತಂದ ಶಿವ**
**ಮಂದಿರಕ್ಕೆ**
**ಪರುಕಿಸುವಡೀಗ ಕಾಶೀಪುರದೊಳೊಪ್ಪ ಕರ**
**ಹಿರಿದೆನಿಪ ಭಕ್ತಿಯ ಪವಾಡಂ ಮೆರೆದನು ಶಿವ ಲೆಂಕ**
**ಮಂಚಣ್ಣನು**
**ಪ್ರಕಾಂಡ ಪಂಡಿತರಾಗಿದ್ದ ಇವರು ನಿಷ್ಟುರ ಶಿವ ಭಕ್ತರು**

ಎಂಬುದಕ್ಕೆ ಮೇಲಿನ ವಚನ ತಕ್ಕ ನಿದರ್ಶನವನ್ನು ನೀಡುತ್ತದೆ. ತರ್ಕ ಮತ್ತು ವಾದಗಳಲ್ಲಿ ನಿಷ್ಣಾತರಾಗಿದ್ದ ಇವರು ವಾದದಲ್ಲಿ ವಿರೋಧಿಗಳನ್ನು ಸೋಲಿಸಿ ಶಿವಾದಿಕ್ಯವನ್ನು ಸ್ಥಾಪಿಸಿದ್ದರು.

ಉಪೇಕ್ಷಿತ ವಚನಕಾರರು

ದೂರದ ಊರುಗಳಿಂದ ಬರುತ್ತಿದ್ದ ಯಾತ್ರೆಗಳಿಂದ ಕಲ್ಯಾಣ ಸಾಮ್ರಾಜ್ಯದ ಅನುಭವ ಮಂಟಪ ಹಾಗೂ ಅದರ ರೂವಾರಿಗಳಾದ ಬಸವಾದಿ ಶಿವ ಶರಣರ ಕುರಿತ ವಿಷಯಗಳನ್ನು ಕೇಳಿ ಅಲ್ಲಿನ ಕಾರ್ಯ ಚಟುವಟಿಕೆಗಳಿಂದ ಆಕರ್ಷಿತರಾದ ಅವರು ಕಲ್ಯಾಣಕ್ಕೆ ಬರಲು ತಹತಹಿಸಿದರು. ಬಸವ ಕಲ್ಯಾಣಕ್ಕೆ ಬಂದು ನೆಲೆಸಿದ ಮಂಚಣ್ಣನವರು ವಚನ ದೀಕ್ಷೆಯನ್ನು ಪಡೆದು ಶಿವಶರಣರಾಗಿ ಪರಿವರ್ತಿತರಾದರು. ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಉತ್ಕೃಷ್ಟ ವಚನ ಚಿಂತನೆಗಳಲ್ಲಿ ಭಾಗವಹಿಸಿ ಕಾಯಕ ದಾಸೋಹ ಮತ್ತು ಶರಣ ತತ್ವಗಳನ್ನು ತಮ್ಮ ಬದುಕಿನ ಭಾಗವನ್ನಾಗಿಸಿಕೊಂಡರು. ಇವರು ಸರಿಸುಮಾರು 132 ವಚನಗಳನ್ನು ರಚಿಸಿದ್ದು ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗ ಎಂಬುದು ಇವರ ವಚನಗಳ ಅಂಕಿತನಾಮವಾಗಿದೆ

ಪ್ರಮುಖ ವಚನಕಾರರಾಗಿರುವ ಶಿವಲೆಂಕ ಮಂಚಣ್ಣನವರ ವಚನಗಳಲ್ಲಿ ಅಷ್ಟಾವರಣದ ಕುರಿತ ವರ್ಣನೆಯನ್ನು ನಾವು ಕಾಣಬಹುದು. ಇದರ ಜೊತೆಗೆ ಸಮಾಜದ ಜನರಲ್ಲಿ ಬೇರೂರಿದ್ದ ಮೌಢ್ಯಗಳ ಕುರಿತಾದ ಮೊನಚಾದ ಛೇಡಿಸುವಿಕೆಗಳನ್ನು ಕೂಡ ನಾವು ಗಮನಿಸಬಹುದು.

ಉರಿಲಿಂಗ ಪೆದ್ದಿಗಳು ಮಂಚಣ್ಣನವರ ಪ್ರಮುಖ



ಶಿಷ್ಯರಲ್ಲಿ ಒಬ್ಬರು.

ಇವರ ಕುರಿತು ನಂಜುಂಡನ ಭೈರವೇಶ್ವರ ಕಾವ್ಯ ಪುರಾಣ, ಗುಬ್ಬಿ ಮಲ್ಲಣಾಚಾರ್ಯರ ವೀರಶೈವಾಮೃತ ಪುರಾಣ ಮತ್ತು ಇತರ ಕಡೆಗಳಲ್ಲಿ ನಮಗೆ ಮಾಹಿತಿ ದೊರೆಯುತ್ತದೆ. ಇವರು ಮಾಡಿರುವ ಹಲವಾರು ಪವಾಡಗಳನ್ನು ಪುರಾಣಗಳಲ್ಲಿ ನಾವು ಕಾಣಬಹುದು.

ಜನರ ಬಾಹ್ಯಾಡಂಬರ, ಡಾಂಭಿಕತೆಗಳ ಕುರಿತು ಖಂಡನೆಯನ್ನು ಮಾಡುತ್ತಿದ್ದ ಇವರು ಡಾಂಭಿಕ ಗುರುಗಳ ಬೂಟಾಟಿಕೆಗಳನ್ನು, ರೀತಿ ನೀತಿಗಳನ್ನು ಕಠಿಣವಾಗಿ ವಿರೋಧಿಸುತ್ತಿದ್ದರು.

ಸದಾಚಾರ ಗುಣವನ್ನು ತಮ್ಮ ಬದುಕಿನ ಧ್ಯೇಯವನ್ನಾಗಿಸಿಕೊಂಡಿದ್ದ ಅವರು ಪರಧನ, ಪರಸತಿ ಯನ್ನು ಬಯಸದೇ ಇರುವುದು ನಿಜವಾದ ವ್ರತವೆಂದು ಸಾರಿದರು. ಶಿವಪೂಜೆ, ಪ್ರಸಾದ ತತ್ವ, ಶರಣರ ಆಚರಣೆಗಳನ್ನು ತಮ್ಮ ವಚನಗಳಲ್ಲಿ ಅವರು ನಿರೂಪಿಸಿದ್ದಾರೆ.

**ಗುರು ವೈಭವಕ್ಕೆ ಸಿಕ್ಕಿದಾಗಲೇ ಶಿಷ್ಯಂಗೆ ನರಕ ಪ್ರಾಪ್ತಿ**
**ಲಿಂಗ ಭಜನೆಗೆ ಸಿಕ್ಕಿದಾಗಲೇ**
**ಮರಣಕ್ಕೊಳಗು**
**ಜಂಗಮ ಜಂಗುಳಿಯಾಗಿ ಕಂಡ**
**ಕಂಡವರಂಗಳಕ್ಕೆ ಜಂಘೆಯನಿಕ್ಕಲಾಗಿ**
**ನಿರಂಗಕ್ಕೆ ಹೊರಗು**
**ಇಂತೀ ಇವರು ನಿಂದುದಕ್ಕೆ**
**ಬಂಧವಿಲ್ಲದಿರಬೇಕು ಈಶಾನ್ಯ ಮೂರ್ತಿ**
**ಮಲ್ಲಿಕಾರ್ಜುನ ಲಿಂಗವನರಿವುದಕ್ಕೆ**

ಯಾವುದೇ ವಸ್ತುವಿರಲಿ, ವಿಷಯವಿರಲಿ ಅದನ್ನು ಆಡಂಬರದಿಂದ ಬೂಟಾಟಿಕೆಯಿಂದ ಹೊತ್ತು ಮೆರೆಸಿದಾಗ ಅದು ತನ್ನ ನಿಜ ಸ್ವರೂಪವನ್ನು ಕಳೆದುಕೊಳ್ಳುತ್ತದೆ. ಶಿವನ ನಿಜವಾದ ತತ್ವಸ್ವರೂಪವನ್ನು ಅರಿಯಲು ವ್ಯಕ್ತಿಯು ಸ್ವತಂತ್ರ ಚಿಂತನೆಗಳನ್ನು ಹೊಂದಿದ್ದು ಸ್ವಚ್ಛ ಆರೋಗ್ಯಕರ ಮನಸ್ಥಿತಿಯನ್ನು ಹೊಂದಿರಬೇಕು ಎಂದು ಅವರ ವಚನಗಳಿಂದ ಅರಿಯಬಹುದು.

**ಈಶ್ವರ ರೂಪ ತಾಳಿ ಜಗಜೀವಾಳರುಗಳ**
**ಬಾಗಿಲಲ್ಲಿ ಬೆಳುಗರೆವನ್ನ ಬರ ಹೋಯಿತ್ತು**
**ವೇಷವಾಟದಲ್ಲಿ ಈ ಆಸೆಯ ಬಿಟ್ಟು.**
**ಈಶನ ರೂಪ ತಾಳಿದ ವಸ್ತು**
**ಆತ ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವು ತಾನೆ**

ಈ ಜಗದ ಸಕಲ ಚರಾಚರಗಳಲ್ಲಿಯೂ ಇರುವ ಈಶ್ವರನನ್ನು ನಾವು ಅರಿಯದೆ ಹೋದರೆ ಅದು ನಮ್ಮ ಮೂಡತನ. ಎಲ್ಲದರಲ್ಲಿಯೂ ಈ ಜಗವನ್ನು ಆಳುವ ಈಶ್ವರನ ರೂಪವಿದೆ ಎಂದು ಈ ವಚನವನ್ನು ನಾವು ಅರ್ಥೈಸಬಹುದು.

ಹೀಗೆ ತಮ್ಮ ವಚನಗಳ ಮೂಲಕ ಜ್ಞಾನದ ಜ್ಯೋತಿಯನ್ನು ನೀಡಿದ ಶಿವಲೆಂಕ ಮಂಚಣ್ಣನವರಿಗೆ ಶರಣು ಶರಣಾರ್ಥಿ



# ಇಲ್ಲದವನಿಗೆ ಇಲ್ಲದ್ದರ ಚಿಂತೆ, ಇದ್ದವನಿಗೆ ಇದ್ದದ್ದರ ಚಿಂತೆ; ಬದುಕು ಅಂತೆ-ಕಂತೆಗಳ ಅಂತ್ಯವಿಲ್ಲದ ಸಂತೆ



| ಶಿವಬಸಪ್ಪ ಗು ಜಂಗಾಲಿ

ಬದುಕು ಎಂಬುದು ವಿಚಿತ್ರವಾದ ಪಯಣ. ಪ್ರತಿಯೊಬ್ಬರೂ ತಮ್ಮದೇ ಆದ ಕನಸುಗಳು, ಕೊರತೆಗಳು, ನಿರೀಕ್ಷೆಗಳು ಮತ್ತು ಚಿಂತೆಗಳನ್ನು ಹೊತ್ತು ಸಾಗುತ್ತಾರೆ. ಹೊರಗಿನಿಂದ ನೋಡಿದಾಗ ಕೆಲವರ ಜೀವನ ಸಂಪೂರ್ಣವಾಗಿ ಕಾಣಬಹುದು; ಮತ್ತೆ ಕೆಲವರ ಜೀವನದಲ್ಲಿ ಕೊರತೆಗಳೇ ಹೆಚ್ಚೆಂದು ಭಾಸವಾಗಬಹುದು. ಆದರೆ ನಿಜವಾಗಿ ನೋಡಿದರೆ, ಪ್ರತಿಯೊಬ್ಬ ಮನುಷ್ಯನ ಮನಸ್ಸಿನೊಳಗೂ ಯಾವುದೋ ಒಂದು ಚಿಂತೆ ಸದಾ ನೆಲೆಸಿರುತ್ತದೆ. ಆದ್ದರಿಂದಲೇ, "ಇಲ್ಲದವನಿಗೆ ಇಲ್ಲದ್ದರ ಚಿಂತೆ, ಇದ್ದವನಿಗೆ ಇದ್ದದ್ದರ ಚಿಂತೆ; ಬದುಕು ಅಂತೆ-ಕಂತೆಗಳ ಅಂತ್ಯವಿಲ್ಲದ ಸಂತೆ" ಎಂಬ ಮಾತು ಜೀವನದ ಆಳವಾದ ಸತ್ಯವನ್ನು ಬಿಚ್ಚಿಡುತ್ತದೆ.

ಬಡವನಿಗೆ ಎರಡು ಹೊತ್ತಿನ ಊಟದ ಚಿಂತೆ. ಮಕ್ಕಳ ವಿದ್ಯಾಭ್ಯಾಸದ ಚಿಂತೆ. ಅನಾರೋಗ್ಯ ಬಂದರೆ ಔಷಧಕ್ಕೆ ಹಣ ಎಲ್ಲಿಂದ ಎನ್ನುವ ಆತಂಕ. ಮಳೆಯಾದರೆ ಮನೆ ಸೋರಬಹುದೇ ಎನ್ನುವ ಭಯ. ಅವನ ಕನಸುಗಳು ಚಿಕ್ಕದಾಗಿರಬಹುದು, ಆದರೆ ಅವನ ಹೋರಾಟ ದೊಡ್ಡದು. ಒಂದು ದಿನ ನೆಮ್ಮದಿಯಿಂದ ಬದುಕಬೇಕೆಂಬ ಆಸೆಯೇ ಅವನಿಗೆ ಜೀವದ ಬಲ.

ಇನ್ನೊಂದೆಡೆ, ಶ್ರೀಮಂತನಿಗೆ ಹಣದ ಕೊರತೆ ಇರದಿದ್ದರೂ ನೆಮ್ಮದಿಯ ಕೊರತೆ ಇರಬಹುದು. ಗಳಿಸಿದ ಸಂಪತ್ತನ್ನು ಉಳಿಸಿಕೊಳ್ಳುವುದು, ವ್ಯವಹಾರ ಬೆಳೆಯುವುದು, ಮಕ್ಕಳ ಭವಿಷ್ಯ, ಸಮಾಜದಲ್ಲಿನ ಸ್ಥಾನಮಾನ, ಆರೋಗ್ಯ, ಸಂಬಂಧಗಳು ಇವೆಲ್ಲವೂ ಅವನ ಚಿಂತೆಯ ವಿಷಯಗಳಾಗುತ್ತವೆ. ಸಂಪತ್ತು ಹೆಚ್ಚಾದಂತೆ ಹೊಣೆಗಾರಿಕೆಯೂ ಹೆಚ್ಚುತ್ತದೆ. ಹಾಗಾಗಿ, ಹಣ ಎಲ್ಲ ಸಮಸ್ಯೆಗಳನ್ನು ಪರಿಹರಿಸುತ್ತದೆ ಎಂಬುದು ಸತ್ಯವಲ್ಲ.

ಮನುಷ್ಯನ ಆಸೆಗೆ ಅಂತ್ಯವಿಲ್ಲ. ಇಂದು ಸೈಕಲ್ ಬೇಕೆಂದುಕೊಂಡವನು ನಾಳೆ ಬೈಕ್ ಬಯಸುತ್ತಾನೆ. ಬೈಕ್ ಬಂದ ಮೇಲೆ ಕಾರಿನ ಕನಸು ಕಾಣುತ್ತಾನೆ. ಕಾರು ಬಂದ ಮೇಲೆ ದೊಡ್ಡ ಮನೆ ಬೇಕೆನಿಸುತ್ತದೆ. ಮನೆ ಕಟ್ಟಿದ ಮೇಲೆ ಮತ್ತಷ್ಟು ಸೌಕರ್ಯಗಳ ಹುಡುಕಾಟ ಶುರುವಾಗುತ್ತದೆ. ಆಸೆಗಳು ಒಂದರ ಹಿಂದೆ ಮತ್ತೊಂದು ಹುಟ್ಟುತ್ತಲೇ ಇರುತ್ತವೆ. ಹೀಗಾಗಿ,





ಚಿಂತೆಗಳಿಗೂ ಕೊನೆಯೇ ಇರುವುದಿಲ್ಲ.

ಇಂದಿನ ಸಮಾಜದಲ್ಲಿ ಹೋಲಿಕೆಯೇ ಅನೇಕ ಚಿಂತೆಗಳಿಗೆ ಕಾರಣವಾಗಿದೆ. ನಮ್ಮ ಬದುಕನ್ನು ನಮ್ಮ ಸಾಮರ್ಥ್ಯದಿಂದ ಅಳೆಯುವುದಕ್ಕಿಂತ, ಇನ್ನೊಬ್ಬರ ಬದುಕಿನೊಂದಿಗೆ ಹೋಲಿಸುವ ಪ್ರವೃತ್ತಿ ಹೆಚ್ಚಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಕಾಣುವ ನಗುಮುಖಗಳು, ಪ್ರವಾಸಗಳು, ಐಷಾರಾಮಿ ಬದುಕು ಇವೆಲ್ಲವನ್ನೂ ನೋಡಿ ನಮ್ಮ ಜೀವನದಲ್ಲಿ ಏನೋ ಕೊರತೆ ಇದೆ ಎನ್ನುವ ಭಾವನೆ ಮೂಡುತ್ತದೆ. ಆದರೆ ಆ ಚಿತ್ರಗಳ ಹಿಂದೆ ಎಷ್ಟೊಂದು ನೋವು, ಒತ್ತಡ ಮತ್ತು ಹೋರಾಟ ಅಡಗಿದೆ ಎಂಬುದು ನಮಗೆ ತಿಳಿದಿರುವುದಿಲ್ಲ.

ಹಣ ಮಾತ್ರವಲ್ಲ, ಸಂಬಂಧಗಳಲ್ಲಿಯೂ ಇದೇ ಸ್ಥಿತಿ. ಒಂಟಿಯಾಗಿರುವವನು ಒಳ್ಳೆಯ ಸಂಗಾತಿಯ ಕನಸು ಕಾಣುತ್ತಾನೆ. ಸಂಗಾತಿ ಸಿಕ್ಕವನು ಉತ್ತಮ ಹೊಂದಾಣಿಕೆಯ ಆಸೆ ಇಡುತ್ತಾನೆ. ಮಕ್ಕಳಿಲ್ಲದವರಿಗೆ ಮಕ್ಕಳ ಹಂಬಲ; ಮಕ್ಕಳಿರುವವರಿಗೆ ಅವರ ಭವಿಷ್ಯದ ಚಿಂತೆ. ಬದುಕಿನ ಪ್ರತಿಯೊಂದು ಹಂತದಲ್ಲೂ ಹೊಸ ಹೊಸ ಪ್ರಶ್ನೆಗಳು ಎದುರಾಗುತ್ತವೆ.

ಉದ್ಯೋಗದಲ್ಲಿಯೂ ಇದೇ ಕಥೆ. ಉದ್ಯೋಗವಿಲ್ಲದವನಿಗೆ ಕೆಲಸ ಬೇಕು. ಕೆಲಸ ಸಿಕ್ಕವನಿಗೆ ಉತ್ತಮ ಸಂಬಳ ಬೇಕು. ಉತ್ತಮ ಸಂಬಳ ಸಿಕ್ಕವನಿಗೆ ಬಡ್ತಿ ಬೇಕು. ಬಡ್ತಿ ಸಿಕ್ಕವನಿಗೆ ಮತ್ತಷ್ಟು ಜವಾಬ್ದಾರಿಗಳು ಬರುತ್ತವೆ. ಈ ಓಟದಲ್ಲಿ ನೆಮ್ಮದಿ ಹಿಂದೆ ಬೀಳುತ್ತದೆ.

ಆರೋಗ್ಯವೇ ನಿಜವಾದ ಸಂಪತ್ತು ಎಂದು ಎಲ್ಲರೂ ಹೇಳುತ್ತಾರೆ. ಆದರೆ ಆರೋಗ್ಯವಾಗಿರುವಾಗ ಅದರ ಮೌಲ್ಯ ತಿಳಿಯುವುದಿಲ್ಲ. ಅನಾರೋಗ್ಯ ಬಂದಾಗ ಮಾತ್ರ ಬದುಕಿನ ನಿಜವಾದ ಅರ್ಥ ಅರಿವಾಗುತ್ತದೆ. ಲಕ್ಷಾಂತರ ರೂಪಾಯಿ ಇದ್ದರೂ ಆರೋಗ್ಯ ಕಳೆದುಕೊಂಡರೆ ಆ ಸಂಪತ್ತಿನ ಬೆಲೆ ಕಡಿಮೆಯಾಗುತ್ತದೆ. ಆದ್ದರಿಂದ ಜೀವನದ ದೊಡ್ಡ ಐಶ್ವರ್ಯ ಮನಶ್ಶಾಂತಿ ಮತ್ತು ಆರೋಗ್ಯವೇ.

ಪ್ರಕೃತಿ ನಮಗೆ ಮಹತ್ವದ ಪಾಠ ಕಲಿಸುತ್ತದೆ. ಮರವು ಫಲ ಕೊಟ್ಟರೂ ಅಹಂಕಾರ ಪಡುವುದಿಲ್ಲ. ನದಿಯು ಹರಿದರೂ ತನ್ನ ಬಗ್ಗೆ ಹೆಮ್ಮೆ ಹೇಳಿಕೊಳ್ಳುವುದಿಲ್ಲ. ಸೂರ್ಯನು ಪ್ರತಿದಿನ ಉದಯಿಸಿದರೂ ಪ್ರತಿಫಲ ಕೇಳುವುದಿಲ್ಲ. ಪ್ರಕೃತಿಯ ಈ ಸರಳತೆ ಮನುಷ್ಯನ ಬದುಕಿಗೂ ಮಾದರಿಯಾಗಬೇಕು. ಇರುವುದರಲ್ಲಿ ಸಂತೋಷ ಕಾಣುವ ಮನಸ್ಸು ಬೆಳೆದರೆ ಚಿಂತೆಗಳ ತೂಕ ಕಡಿಮೆಯಾಗುತ್ತದೆ.

ನಮ್ಮ ಹಿರಿಯರು ಹೇಳುತ್ತಿದ್ದ ಒಂದು ಮಾತು ಇಂದಿಗೂ ಸತ್ಯ: "ತೃಪ್ತಿಗಿಂತ ದೊಡ್ಡ ಸಂಪತ್ತು ಮತ್ತೊಂದಿಲ್ಲ." ತೃಪ್ತಿ ಎಂದರೆ ಬೆಳವಣಿಗೆಯನ್ನು ನಿಲ್ಲಿಸುವುದಲ್ಲ; ಬದಲಾಗಿ, ಇಂದಿನ ಕ್ಷಣದ ಮೌಲ್ಯವನ್ನು ಅರಿತುಕೊಂಡು ಮುಂದಕ್ಕೆ ಸಾಗುವ ಗುಣ. ಇದು ಬದುಕನ್ನು ಸುಂದರಗೊಳಿಸುವ ಶಕ್ತಿ.

ಮಕ್ಕಳಿಗೆ ನಾವು ಹಣವನ್ನಷ್ಟೇ ಕೊಡುವುದಕ್ಕಿಂತ, ಜೀವನದ ಮೌಲ್ಯಗಳನ್ನು ಕಲಿಸಬೇಕು. ಯಶಸ್ಸಿನ ಜೊತೆಗೆ ಸೋಲನ್ನೂ ಸ್ವೀಕರಿಸುವ ಮನೋಭಾವ, ಇತರರ ಸಂತೋಷದಲ್ಲಿ ಸಂತೋಷಪಡುವ ಗುಣ, ಕಷ್ಟದಲ್ಲಿಯೂ ಧೈರ್ಯ ಕಳೆದುಕೊಳ್ಳದ ಮನಸ್ಸು ಇವೇ ನಿಜವಾದ ಆಸ್ತಿ.

ಚಿಂತೆ ಇಲ್ಲದ ಜೀವನ ಯಾರಿಗೂ ಇಲ್ಲ. ಆದರೆ ಚಿಂತೆಯನ್ನೇ ಜೀವನವನ್ನಾಗಿಸಿಕೊಳ್ಳುವುದು ತಪ್ಪು. ಪ್ರತಿಯೊಂದು ಸಮಸ್ಯೆಗೆ ಒಂದು ಪರಿಹಾರವಿರುತ್ತದೆ. ಕೆಲವೊಮ್ಮೆ ಕಾಲವೇ ಉತ್ತರ ಕೊಡುತ್ತದೆ. ಕೆಲವೊಮ್ಮೆ ಅನುಭವವೇ ದಾರಿ ತೋರಿಸುತ್ತದೆ. ಆದ್ದರಿಂದ ಆತುರಕ್ಕಿಂತ ಸಹನೆ ಮುಖ್ಯ.

ಬದುಕಿನಲ್ಲಿ ಸಂತೋಷವು ದೊಡ್ಡ ಸಾಧನೆಗಳಿಂದ ಮಾತ್ರ ಬರುವುದಿಲ್ಲ. ಕುಟುಂಬದೊಂದಿಗೆ ಕಳೆಯುವ ಕೆಲವು ಕ್ಷಣಗಳು, ಸ್ನೇಹಿತನ ನಗು, ತಾಯಿಯ ಮಮತೆ, ತಂದೆಯ ಆಶೀರ್ವಾದ, ಮಗುವಿನ ನಿಷ್ಕಪಟ ಮಾತು ಇವೆಲ್ಲವೂ ಬದುಕಿನ ಅಮೂಲ್ಯ ಸಂಪತ್ತು. ಇವುಗಳನ್ನು ಕಾಪಾಡಿಕೊಂಡರೆ ಮನಸ್ಸಿನಲ್ಲಿರುವ ಅನೇಕ ಚಿಂತೆಗಳು ಕರಗುತ್ತವೆ.

ಕೊನೆಗೆ, ಬದುಕು ಎಲ್ಲರಿಗೂ ಒಂದೇ ರೀತಿಯ ಪ್ರಶ್ನೆಗಳನ್ನು ಕೇಳುವುದಿಲ್ಲ. ಪ್ರತಿಯೊಬ್ಬರ ಪರೀಕ್ಷೆ ವಿಭಿನ್ನ. ಆದ್ದರಿಂದ ಇನ್ನೊಬ್ಬರ ಬದುಕನ್ನು ನೋಡಿ ಅಸೂಯೆಪಡುವುದಕ್ಕಿಂತ, ನಮ್ಮ ಬದುಕಿನ ಮೌಲ್ಯವನ್ನು ಅರಿಯುವುದು ಮುಖ್ಯ. ಇರುವುದನ್ನು ಕೃತಜ್ಞತೆಯಿಂದ ಸ್ವೀಕರಿಸಿ, ಇಲ್ಲದ್ದನ್ನು ಪರಿಶ್ರಮದಿಂದ ಪಡೆಯಲು ಪ್ರಯತ್ನಿಸುವ ಮನೋಭಾವವೇ ನಿಜವಾದ ಯಶಸ್ಸಿನ ದಾರಿ.

ಇಲ್ಲದವನಿಗೆ ಇಲ್ಲದ್ದರ ಚಿಂತೆ, ಇದ್ದವನಿಗೆ ಇದ್ದದ್ದರ ಚಿಂತೆ. ಈ ಚಿಂತೆಗಳ ನಡುವೆ ಬದುಕು ಸಾಗುತ್ತಲೇ ಇರುತ್ತದೆ. ಆದರೆ ತೃಪ್ತಿ, ಕೃತಜ್ಞತೆ ಮತ್ತು ಪ್ರೀತಿಯನ್ನು ಬದುಕಿನ ಸಂಗಾತಿಯನ್ನಾಗಿ ಮಾಡಿಕೊಂಡವನು ಮಾತ್ರ ಈ ಅಂತ್ಯವಿಲ್ಲದ ಸಂತೆಯಲ್ಲಿಯೂ ನೆಮ್ಮದಿಯ ಹಾದಿಯನ್ನು ಕಂಡುಕೊಳ್ಳುತ್ತಾನೆ. ಏಕೆಂದರೆ ಬದುಕಿನ ನಿಜವಾದ ಶ್ರೀಮಂತಿಕೆ ಹಣದಲ್ಲಲ್ಲ; ಮನಸ್ಸಿನ ಶಾಂತಿ, ಸಂಬಂಧಗಳ ಸೌಹಾರ್ದ ಮತ್ತು ಹೃದಯದ ತೃಪ್ತಿಯಲ್ಲಿದೆ.

# 3 ಬಾರಿ ಸಾಮೂಹಿಕ ಯೋಗಭ್ಯಾಸ ನೆಡೆಸುತ್ತಿರುವುದು ಖುಷಿ ತಂದಿದೆ

**ನಂಜನಗೂಡು:** ದೇವಾಲಯದ ಆವರಣದ ಮುಂಭಾಗದಲ್ಲಿ ಮೂರನೇ ಬಾರಿ ಸಾಮೂಹಿಕ ಯೋಗಭ್ಯಾಸ ನಡೆಸುತ್ತಿರುವುದು, ಕ್ಷೇತ್ರದ ಶಾಸಕನಾಗಿ ನನಗೆ ಬಹಳ ಹೆಮ್ಮೆ ಹಾಗೂ ಖುಷಿ ವಿಚಾರವಾಗಿದೆ. ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು ಆನ್‌ಲೈನ್ಸುದ್ದಿ

ಅವರು ನಗರದ ಶ್ರೀ ಶ್ರೀಕಂಠೇಶ್ವರ ದೇವಸ್ಥಾನದ ಆವರಣದಲ್ಲಿ ಜಿಲ್ಲಾಡಳಿತ ಹಾಗೂ ಆಯುಷ್ಮಾನ್ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ 90 ದಿನಗಳ ಕಾಲ ನಡೆಯುವ ?ಯೋಗ ಹಬ್? ಕಾರ್ಯಕ್ರಮವನ್ನು ಯೋಗ ಪಟುಗಳೊಂದಿಗೆ ಯೋಗಾಭ್ಯಾಸ ಮಾಡುವ ಮೂಲಕ ಚಾಲನೆ ನೀಡಿದರು.

ನಂತರ ಮಾತಾನಾಡಿದ ಅವರು ಯೋಗಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುವ ನಿಟ್ಟಿನಲ್ಲಿ ನಾಡ ಹಬ್ಬ ದಸರಾದ ?ಯೋಗ ದಸರ? ಗರಳಪುರಿ ಉತ್ಸವದಲ್ಲಿಯೂ ?ಯೋಗೋತ್ಸವ? ಮತ್ತು ಇಂದು ಯೋಗ ಹಬ್ ಕಾರ್ಯಕ್ರಮ ಯಶಸ್ವಿಯಾಗಿ ಆಯೋಜಿಸಿ, ಸಾರ್ವಜನಿಕರಲ್ಲಿ ಯೋಗದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದೇವೆ. ತಾಲ್ಲೂಕಿನ 45 ಗ್ರಾಂ ಪಂ ಗಳಲ್ಲಿ 90 ದಿನಗಳ ಕಾಲ ಯೋಗ ಹಬ್ಬ್ ಕಾರ್ಯಕ್ರಮ ಜರುಗಲಿದೆ.

ನಮ್ಮ ಜೀವನವು ಒತ್ತಡ ಹಾಗೂ ವೇಗದ ಜೀವನವಾಗಿದೆ ಇದನ್ನು ನಾವು ಹತೋಟಿಗೆ ತರಲು ಯೋಗಭ್ಯಾಸ, ನಮಗೆ ಬಹಳ ಸಹಕಾರಿ ಯಾಗುತ್ತದೆ. ಮೈಸೂರು ಯೋಗದ ತವರೂರು ರಾಜ ಮಹಾರಾಜರು ಕೂಡ ಅಂದಿನ ಕಾಲದಲ್ಲಿ ಯೋಗಭ್ಯಾಸವನ್ನು ನಿರಂತರವಾಗಿ ಮಾಡುತ್ತಿದ್ದರು. ಇಲ್ಲಿ ಯೋಗವನ್ನು ಕಲಿತು ಪರದೇಶಗಳಲ್ಲಿ ಯೋಗವನ್ನು ಕಲಿಸುತ್ತಿದ್ದಾರೆ. ಸಂಸದ ಸುನಿಲ್ ಬೋಸ್ ಮಾತನಾಡುತ್ತಾ ನಮ್ಮ ಪೂರ್ವಿಕರು ತಮ್ಮಗೆ ಅರಿವಿಲ್ಲದೆ ಯೋಗಭ್ಯಾಸ



ಮಾಡುತ್ತಿದ್ದರು. ಅವರು ದೈನಂದಿನ ದಿನಚರಿಯಲ್ಲಿಯೇ ಯೋಗಭ್ಯಾಸ ಇತ್ತು. ಇತ್ತೀಚಿನ ದಿನಗಳಲ್ಲಿ ನಮ್ಮ ಎಲ್ಲಾ ಕೆಲಸವನ್ನು ಯಂತ್ರಗಳು ಮಾಡುತ್ತಿರುವುದರಿಂದ ನಮ್ಮ ಯೋಗಕ್ಕೆ ಯಾವುದೇ ರೀತಿಯ ವ್ಯಾಯಾಮ ಸಿಗುತ್ತಿಲ್ಲ. ಕಿರಿಯ ವಯಸ್ಸಿನಲ್ಲಿ ಕೆಲವರಿಗೆ ಹೃದಯಘಾತ ಕಿಡ್ನಿ ಲಿವರ್ ಇನ್ನು ಮುಂತಾದ ದೀರ್ಘಕಾಲಿಕ ರೋಗಗಳಿಗೆ ತುತ್ತಾಗುತ್ತಿದ್ದಾರೆ ಯೋಗ ಮಾಡುವುದರಿಂದ ಆರೋಗ್ಯವನ್ನು ಸಮತೋಲನವಾಗಿ ಇಟ್ಟುಕೊಳ್ಳಬಹುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಕೆ. ಮಾರುತಿ, ನಗರಸಭೆ ಪೌರಾಯುಕ್ತರಾದ ಬಸವರಾಜ್, ದೇವಸ್ಥಾನ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಬಸವೇಗೌಡ, ಮಾಜಿ ನಗರಸಭೆ ಅಧ್ಯಕ್ಷರಾದ ಶ್ರೀಕಂಠ ಸ್ವಾಮಿ , ನಗರ ಬ್ಲಾಕ್ ಅಧ್ಯಕ್ಷರಾದ ಸಿ. ಎಂ ಶಂಕರ್, ಶ್ರೀಧರ್, ಗಾಯತ್ರಿ ಮೋಹನ್, ಕೆ. ಬಿ. ಸ್ವಾಮಿ, ಗಂಗಾಧರ್, ಗೋಪಾಲ ಕೃಷ್ಣ, ಗಿರೀಶ್ ಇಲಾಖೆಯ ಅಧಿಕಾರಿಗಳಾದ ಡಾ ಅಶೋಕ್ ಕುಮಾರ್,ಡಾ ಸುಜಾತ, ಡಾ,ರಾಘವೇಂದ್ರ ಸೇರಿದಂತೆ ಇಲಾಖೆಯ ಅಧಿಕಾರಿಗಳು, ಮುಖಂಡರು ಹಾಗೂ ಯೋಗಪಟುಗಳು ಉಪಸ್ಥಿತರಿದ್ದರು.

# ದೇಗುಲಗಳ ವಿಶೇಷತೆ



| ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ದೇಗುಲ,ದೇವಸ್ಥಾನ,ದೇವಾಲಯ ಎಂದರೆ ಧಾರ್ಮಿಕ ಹಾಗೂ ಅಧ್ಯಾತ್ಮಿಕ ಚಟುವಟಿಕೆಗಳಿಗೆ ಮೀಸಲಾದ ಸ್ಥಳವಾಗಿದೆ. ನಂಬಿಕೆಯ ಪ್ರಕಾರ ದೇವಸ್ಥಾನ ದೇವರು ನೆಲೆಸಿದ ಸ್ಥಳವೆನ್ನಬಹುದು. ದೇವಸ್ಥಾನಗಳ ದೈವ ಸನ್ನಿಧಿಗೆ ಆಭರಣ ಭೂಷಣವಾಗಿ ಗೋಪುರಗಳು ನಿರ್ಮಿಸಲ್ಪಟ್ಟಿರುತ್ತವೆ.

ಗೋಪುರಗಳಲ್ಲಿ ದೇವದೇವತೆಯರ ,ಪುರಾಣ ಪ್ರಸಂಗಗಳ,ಗರುಡ,ರಥ,ಸೂರ್ಯ,ಆಕಳು ಹೀಗೆ ಪವಿತ್ರ ವಸ್ತುಗಳನ್ನು ವಿದ್ಯುಕ್ತವಾಗಿ ಕೆತ್ತಲಾಗಿರುತ್ತದೆ.ದೇವಸ್ಥಾನ ಎಂದರೆ ಸಾತ್ವಿಕ ಕಂಪನವಿರುವ ಸ್ಥಳ.ದೇವಸ್ಥಾನದಲ್ಲಿ ನಾಲ್ಕು ವಿಧ. ಭಕ್ತರ ತಪಸ್ಸಿಗೆ ಮೆಚ್ಚಿ ದೇವರು ಪ್ರತ್ಯಕ್ಷವಾಗುವದು,ಧರ್ಮಸ್ಥಾಪನೆಗಾಗಿ,ಭಕ್ತರೊಳಿತಿಗಾಗಿ,ಅಲ್ಲೇ ನಿಂತು ಪೂಜೆಸಲ್ಲಿಸುವವರು.ನಾವು ದೇವರ ದರ್ಶನ ಪಡೆಯಲು ಪ್ರತಿದಿನ ದೇವಸ್ಥಾನಕ್ಕೆ ಹೋಗುತ್ತೇವೆ.ಆದರೆ ನಮ್ಮಲ್ಲಿರುವ ಬಹಳಷ್ಟು ಜನರಿಗೆ ದೇವಸ್ಥಾನದ ಮಹತಗವ ತಿಳಿದಿರುವದಿಲ್ಲ.ನಮ್ಮ ದೇಶದಲ್ಲಿರುವ ದೇವಸ್ಥಾನಗಳು ಒಂದಿಲ್ಲೊಂದು ಐತಿಹಾಸಿಕ ಹಿನ್ನೆಲೆ ಪಡೆದಿವೆ.



1. ದೇವಸ್ಥಾನಗಳು ಕೆಲವು ಧರ್ಮಸ್ಥಾಪನೆಗಾಗಿ ಭಕ್ತರ ಶ್ರೇಯಸ್ಸಿಗಾಗಿ,ಲೋಕಕಲ್ಯಾಣಕ್ಕಾಗಿ ಉದ್ಭವಿಸಿ ಅಲ್ಲೇ ನೆಲೆನಿಂತು ಪೂಜೆ ಸಲ್ಲಿಸುವದು.ಉದಾ. ಪಂಡರಾಪುರದ ಪಾಂಡುರಂಗ,ತಿರುಪತಿ ತಿರುಮಲ,ಉಜ್ಜಯನಿಯ ಮಹಾಕಾಲ.
2. ಯುಗಪುರುಷರು ಪ್ರತಿಷ್ಠಾಪನೆ ಮಾಡಿದ ದೇವಾಲಯಗಳು.ಉದಾ.ಕೃಷ್ಣ,ರಾಮ.
3. ದೇವತೆಗಳು ಪ್ರತಿಷ್ಠಾಪನೆ ಮಾಡಿದ ದೇವಾಲಯಗಳು.ಉದಾ. ನಾರದ,ಇಂದ್ರಾದಿದೇವತೆಗಳು.
4. ಮಾನವರು ಪ್ರತಷ್ಠಾಪಿಸಿದ ದೇವಸ್ಥಾನಗಳು.

ಈ ಎಲ್ಲ ದೇವಸ್ಥಾನಗಳಲ್ಲಿ ಉದ್ಭವ,ಪ್ರತ್ಯಕ್ಷ,ಯುಗಪುರುಷರು ಕಟ್ಟಿದ,ದೇವತೆಗಳು ಸ್ಥಾಪಿಸಿದ ದೇವಸ್ಥಾನಗಳು ಹೆಚ್ಚು ಶ್ರೇಷ್ಠತೆ ಹೊಂದಿವೆ.ಕಾರಣವೇನೆಂದರೆ ಅಲ್ಲಿ ಹೆಚ್ಚಿನ ರೀತಿಯ ಸಾತ್ವಿಕ ಕಂಪನಗಳು ಇದ್ದು ಪ್ರಾರ್ಥನೆಯು ಬೇಗ ಫಲಿಸುತ್ತದೆ.ಯಾವುದೇ ದೇವಸ್ಥಾನ ಪ್ರತಿಷ್ಠಾಪನೆ ಮಾಡುವ ಮೊದಲು ಸಾತ್ವಿಕ ಶಕ್ತಿಯ ವೃದ್ಧಿಗಾಗಿ ನಿರಂತರವಾಗಿ ಲೋಕೋದ್ಧಾರಕ ಯಾಗಗಳು ನಡೆದಿರುತ್ತವೆ.ಮಾನವರು ದೇವಸ್ಥಾನವನ್ನು ಹೆಚ್ಚಾಗಿ ಕಾಂತೀಯ ಮತ್ತು ವಿದ್ಯುತ್ ತರಂಗಗಳಿರುವ ಕಡೆಯೇ ಕಟ್ಟುತ್ತಾರೆ.ಕಾರಣ ಆ ತರಂಗಗಳು ದೇವಸ್ಥಾನದಲ್ಲಿ ಧನಾತ್ಮಕ ಶಕ್ತಿ ಉತ್ಪನ್ನ ಮಾಡುತ್ತವೆ.ಈ ಭಾಗದಲ್ಲಿ ಕಾಂತೀಯ ಶಕ್ತಿ ಹೆಚ್ಚಾಗಿರುವದಲ್ಲದೇ ಗರ್ಭಗುಡಿಯಲ್ಲಿ ಧನಾತ್ಮಕ ಶಕ್ತಿ ಹೆಚ್ಚಿರುತ್ತದೆ.ದಿನನಿತ್ಯ ದೇವಸ್ಥಾನಕ್ಕೆ ಹೋಗುವದರಿಂದ ನಮಗೆ ಅಲ್ಲಿನ ಸಾತ್ವಿಕತೆ ಗುರುತಿಸಲು ಸಾಧ್ಯವಾಗುವದಲ್ಲದೇ ಅದರ ಸಾತ್ವಿಕ ವಾತಾವರಣದಿಂದ ದೇವರ ಮೇಲಿನ ಭಕ್ತಿ ಹೆಚ್ಚಾಗುತ್ತದೆ.ದೇವಸ್ಥಾನದ ಪೂಜೆ ,ಅಭಿಷೇಕ,ಆರತಿಯ ಸಮಯದಲ್ಲಿ ದೇವರ ಸೂಕ್ಷ್ಮ ಚಿತನ್ಯ ಕಣಗಳು ದೇವರ ಮೂರ್ತಿಯ ಕಡೆಗೆ ಹೆಚ್ಚು ಆಕರ್ಷಿತವಾಗಿರುತ್ತವೆ.ಇಂತಹ ಸಮಯದಲ್ಲಿ ನಾವು ದೇವಸ್ಥಾನದಲ್ಲಿ ಇರುವದರಿಂದ ನಮಗೆ ಮನಸ್ಸಿಗೆ ಆಹ್ಲಾದ,ನೆಮ್ಮದಿ ಸಿಗುವದಲ್ಲದೇ ನಮ್ಮ ಜೀವನದಲ್ಲಿ ಅನೇಕ ಲಾಭ ಕಾಣಬಹುದು.ಏಳ್ಗೆ ನೋಡಬಹುದು.

**ದೇವಸ್ಥಾನಕ್ಕೆ ಪ್ರವೇಶಿಸುವ ಮೊದಲು ಅನುಸರಿಸುವ ಕ್ರಮಗಳು.**

1. ದೇವಸ್ಥಾನ ಪ್ರವೇಶಿಸುವ ಮೊದಲು ಕೈ.ಕಾಲು ತೊಳೆದು ಪ್ರವೇಶಿಸಬೇಕು.
2. ಬೀಡಿ,ಸಿಗರೇಟು,ಮಾಂಸ,ಸರಾಯಿ ಸೇವಿಸಿ ದೇವಸ್ಥಾನ ಪ್ರವೇಶಿಸಬಾರದು.
1. ದೇವಾಲಯ ಹೊಸ್ತಿಲಕ್ಕೆ,ಕಿಟಕಿಯಲ್ಲಿ ಕರ್ಪೂರ ಬೆಳಗಬಾರದು.
4. ದೇವರ ಮುಂದೆ ಕಾಲುಚಾಚಿ ಮಲಗಬಾರದು.
1. ದೇವರನ್ನು ಸಮ್ಮುಖದಲ್ಲಿ ದರ್ಶನ ಮಾಡಿ ಪ್ರದಕ್ಷಿಣೆ ಮಾಡಬೇಕು.
6. ಯಾರಿಗೂ ಕೇಡು ಬಯಸಬಾರದು .ಒಳ್ಳೆಯ ಮನಸ್ಸಿನಿಂದ ದೇವಸ್ಥಾನ ಪ್ರವೇಶಿಸಬೇಕು.

ನಮ್ಮ ದೇಶದ ಸಂಸ್ಕೃತಿ ,ಧರ್ಮ ದೇವಸ್ಥಾನದ ಪವಿತ್ರತೆ ಪ್ರತಿಯೊಬ್ಬರೂ ಕಾಪಾಡಬೇಕು.

ಸರ್ವೇಜನಾ ಸುಖಿನೋ ಭವಂತು

# ನೂಲಲ್ಲೇ ದೇವರನ್ನು ಹೆಣೆದ ಕೈಗಳು



| ಡಾ.ಸುಧಾಕರ.ಜಿ.ಲಕ್ಕವಳ್ಳಿ



ಸ್ಫೂರ್ತಿ ಸುದ್ಧಿ - 73

ಒಡಿಶಾದ ಮಣ್ಣಿನ ವಾಸನೆ, ಪುರಾಣದ ಪಾವಿತ್ರ್ಯ ಮತ್ತು ಇಕತ್‌ನ ಮೋಹಕತೆಯನ್ನು ಒಂದೇ ಮಗ್ಗದಲ್ಲಿ ಬಂಧಿಸಿದ ಮಹಾ ಶಿಲ್ಪಿ ಶ್ರೀ ಶರತ್ ಕುಮಾರ್ ಪಾತ್ರ. ಕೈಮಗ್ಗ ಕಲೆಗೆ ಸಲ್ಲಿಸಿದ ಅಸಾಮಾನ್ಯ ಸೇವೆಗೆ ಗುರುತಾಗಿ ಅವರಿಗೆ 2026ನೇ ಸಾಲಿನ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ಸಂದಿದೆ. ಇದು ಒಬ್ಬ ನೇಕಾರನ ಸಾಧನೆಗೆ ಮಾತ್ರವಲ್ಲ, ಅಳಿವಿನಂಚಿನಲ್ಲಿದ್ದ ಪರಂಪರೆಗೆ ರಾಷ್ಟ್ರ ನೀಡಿದ ಗೌರವ.

ಇಕತ್ ನೇಯ್ಗೆ ಒಂದು ಕಲೆ ಮಾತ್ರವಲ್ಲ,ಅದು ಕಠಿಣ ತಪಸ್ಸು. ಮೊದಲು ನೂಲನ್ನು ಬಂಧಿಸಿ ಬಣ್ಣ ಹಾಕುವ ಟೈ-ಅಂಡ್-ಡೈ ತಂತ್ರ, ಬಳಿಕ ಅದೇ ನೂಲಿನ ಮೇಲೆ ಚಿತ್ರ ಬಿಡಿಸಿ ನೇಯುವುದು. ಈ ಸಂಕೀರ್ಣ ಪ್ರಕ್ರಿಯೆಯಲ್ಲಿ ಶರತ್ ಕುಮಾರ್ ಅವರ ಬೆರಳುಗಳು ಮಂತ್ರ ಹಾಕುತ್ತವೆ. ನೂಲಿನ ಎಳೆಯಲ್ಲೇ ದೇವಾನು ದೇವತೆಗಳನ್ನು,ಕಾವ್ಯವನ್ನು ಮೂಡಿಸುವ ಅವರ ಕೈಚಳಕ ನೋಡುಗರನ್ನು ಬೆರಗುಗೊಳಿಸುತ್ತದೆ.

ಅವರ ದಶಾವತಾರ ಇಕತ್ ವಾಲ್ ಮತ್ತು ಗೀತ ಗೋವಿಂದ ಪಟ ಕೈಮಗ್ಗ ಲೋಕದ ಮೇರುಕೃತಿಗಳು. ವಿಷ್ಣುವಿನ ಹತ್ತು ಅವತಾರಗಳನ್ನು, ಜಯದೇವನ ಕಾವ್ಯದ ಶೃಂಗಾರ ರಸವನ್ನು ನೂಲಿನಲ್ಲಿ ಜೀವಂತಗೊಳಿಸಿದರು. ಪ್ರತಿಯೊಂದು ಎಳೆಯಲ್ಲೂ ಭಕ್ತಿ, ಪ್ರತಿಯೊಂದು ನೇಯ್ಗೆಯಲ್ಲೂ ಕಾವ್ಯ ಅರಳುತ್ತದೆ. ಇಕತ್ ಎಂದರೆ ಕೇವಲ ವಿನ್ಯಾಸವಲ್ಲ, ಅದು ನಮ್ಮ ಪರಂಪರೆಯ ಉಸಿರು ಎಂಬುದನ್ನು ಅವರು ಜಗತ್ತಿಗೆ ಸಾರಿದರು.

ಈ ಕಲೆಯನ್ನು ಉಳಿಸಲು ಅವರು ಅನೇಕ ನೇಕಾರರಿಗೆ ಇಕತ್ ತರಬೇತಿ ನೀಡಿ ಹೊಸ ತಲೆಮಾರನ್ನು ರೂಪಿಸಿದರು. ಮಗ್ಗವನ್ನು ದೇವಾಲಯವನ್ನಾಗಿಸಿ, ನೂಲಿನಲ್ಲಿ ಪುರಾಣ ರಚಿಸಿದ ಕಲಾಯೋಗಿಯ ಬೆರಳುಗಳು ಇಂದು ರಾಷ್ಟ್ರದ ಗೌರವಕ್ಕೆ ಪಾತ್ರವಾಗಿವೆ. ನೂಲು ಬಟ್ಟೆಯಾಗದೆ,ನೂಲಿನಲ್ಲೇ ದೇವಾಲಯವಾಗಿ ನಿಂತಿದೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,